# ಮೈಸೂರು ವಿಶ್ವವಿದ್ಯಾನಿಲಯ

ದಿನಾಂಕ 22-06-2017 ರಂದು ಬೆಳಿಗ್ಗೆ 11.00 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ಜರುಗಿದ ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆಯ ನಡಾವಳಿಗಳು.

**<u>ಹಾಜರಿದ್ದ ಸದಸ್ಯರು</u>**

| | | |
|---|---|---|
| 1. | ಪ್ರೊ. ದಯಾನಂದ ಮಾನೆ | – ಕುಲಪತಿಗಳು (ಪ್ರಭಾರ) ಹಾಗೂ ಅಧ್ಯಕ್ಷರು |
| 2. | ಡಾ. ನಿಂಗಮ್ಮ ಸಿ. ಬೆಟ್‌ಸೂರ್ | – ಸದಸ್ಯರು |
| 3. | ಶ್ರೀ ಕಾಳೇಗೌಡ ಕೆ.ಎಂ. | – ಸದಸ್ಯರು |
| 4. | ಶ್ರೀ ಪುಷ್ಪಕುಮಾರ್ ಎಂ.ವಿ. | – ಸದಸ್ಯರು |
| 5. | ಶ್ರೀಮತಿ ಪೊನ್ನಮ್ಮ ಎಂ.ಎನ್ | – ಸದಸ್ಯರು |
| 6. | ಡಾ. ಎಂ.ಸಿ. ನಟರಾಜ | – ಸದಸ್ಯರು |
| 7. | ಪ್ರೊ. ಡಿ. ನಂಜುಂಡಯ್ಯ | – ಸದಸ್ಯರು |
| 8. | ಶ್ರೀ ಲಯನ್ ಹೆಚ್.ರಮೇಶ್ | – ಸದಸ್ಯರು |
| 9. | ಶ್ರೀ ಮಹಮದ್ ಅಬ್ದುಸ್ಸಲಾಂ | – ಸದಸ್ಯರು |
| 10. | ಶ್ರೀಮತಿ ಶೃತಿ ತರುಣ್ ಗಿರಿ | – ಸದಸ್ಯರು |
| 11. | ಶ್ರೀ ಕುಮಾರ್ | – ಸದಸ್ಯರು |
| 12. | ಶ್ರೀ ಎಂ.ಎಸ್.ಎಸ್. ಕುಮಾರ್ | – ಸದಸ್ಯರು |
| 13. | ಪ್ರೊ. ಜೆ.ಸೋಮಶೇಖರ್<br>ಕುಲಸಚಿವ (ಪರೀಕ್ಷಾಂಗ) | – ಸದಸ್ಯರು |
| 14. | ಶ್ರೀಮತಿ ಡಿ. ಭಾರತಿ<br>ಕುಲಸಚಿವರು | – ಸದಸ್ಯ ಕಾರ್ಯದರ್ಶಿಗಳು |

**<u>ಹಾಜರಾಗದ ಸದಸ್ಯರು</u>**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ

ಮೊದಲಿಗೆ ಸನ್ಮಾನ್ಯ ಕುಲಪತಿಯವರಾದ ಪ್ರೊ. ದಯಾನಂದ ಮಾನೆಯವರು 4ನೇ ಸಿಂಡಿಕೇಟ್ ಸಭೆಗೆ ಆಗಮಿಸಿದ್ದ ಎಲ್ಲಾ ಸಿಂಡಿಕೇಟ್ ಸದಸ್ಯರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ, ಹೊಸದಾಗಿ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ನೇಮಕಗೊಂಡು ಸಿಂಡಿಕೇಟಿನ ಸದಸ್ಯ ಕಾರ್ಯದರ್ಶಿಯಾಗಿ ಉಪಸ್ಥಿತರಿರುವ ಶ್ರೀಮತಿ ಡಿ.ಭಾರತಿ ಅವರನ್ನು ಸ್ವಾಗತಿಸಿ, ಸಭೆಗೆ ಪರಿಚಯಿಸಿದರು.

ಹಾಗೆಯೇ ಕುಲಸಚಿವರಾಗಿ ಹಾಗೂ ಸಿಂಡಿಕೇಟ್ ಸಭೆಯ ಸದಸ್ಯರಾಗಿ ಕಾರ್ಯನಿರ್ವಹಿಸಿ ಅವರ ಮಾತೃ ಸಂಸ್ಥೆಗೆ ವರ್ಗಾವಣೆಯಾಗಿರುವ ಪ್ರೊ. ಆರ್. ರಾಜಣ್ಣನವರ ಸೇವೆಯನ್ನು ಸ್ಮರಿಸಿ ಕಡತದಲ್ಲಿ ದಾಖಲಿಸಲಾಯಿತು.

ಶ್ರೀಮತಿ ಡಿ. ಭಾರತಿಯವರು ಕರ್ನಾಟಕ ಆಡಳಿತ ಸೇವೆಯ ಹಿರಿಯ ಅಧಿಕಾರಿಯಾಗಿದ್ದು, ಇವರು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಉನ್ನತ ಜವಾಬ್ದಾರಿಯುತ ಹುದ್ದೆಗಳಲ್ಲಿ ಕೆಲಸಗಳನ್ನು ನಿರ್ವಹಿಸಿದ್ದಾರೆ. ಆಡಳಿತದಲ್ಲಿ ಸಾಕಷ್ಟು ಅನುಭವವಿರುವ ಇವರು ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದ ಕುಲಸಚಿವರಾಗಿರುವುದರಿಂದ ಆದಷ್ಟು ಬೇಗನೆ ಕೆಲಸಕಾರ್ಯಗಳು ಸುಲಲಲಿತವಾಗಿ ನಡೆಯುತ್ತವೆ ಎಂದು ನಾನು ಭಾವಿಸಿದ್ದೇನೆ. ಶ್ರೀಮತಿ ಭಾರತಿಯವರು ಸಹ ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳುವಾಗ ನನ್ನ ಜೊತೆ ಮುಕ್ತವಾಗಿ ಚರ್ಚಿಸುತ್ತಾರೆ. ಆದುದರಿಂದ ಯಾವುದೇ ಸಮಸ್ಯೆಗಳು ಬರುವುದಿಲ್ಲವೆಂದರು.

ಮುಂದುವರೆದು ಮಾತನಾಡುತ್ತಾ, 2017–18ನೇ ಸಾಲಿನ ಶೈಕ್ಷಣಿಕ ಸಾಲಿನಿಂದ ಪದವಿ ಹಾಗೂ ಸ್ನಾತಕೋತ್ತರ ತರಗತಿಗಳು ಇಷ್ಟರಲ್ಲೇ ಪ್ರಾರಂಭವಾಗಲಿದ್ದು, ಕಾಲೇಜು ಮತ್ತು ವಿಭಾಗಗಳಲ್ಲಿನ ಕಾರ್ಯಭಾರಕ್ಕನುಗುಣವಾಗಿ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಈ ದಿಸೆಯಲ್ಲಿ ಸೂಕ್ತಕ್ರಮಗಳನ್ನು ಕುಲಸಚಿವರು ಶೀಘ್ರವಾಗಿ ಕೈಗೊಳ್ಳಬೇಕೆಂದರು.

ನಂತರ ಮಾತನಾಡಿದ ಕುಲಸಚಿವರು, ಸಭೆಗೆ ವಂದಿಸುತ್ತಾ, ಈಗಾಗಲೇ ಎಲ್ಲಾ ಘಟಕ ಕಾಲೇಜು/ವಿಭಾಗ/ಕೇಂದ್ರಗಳ ಮುಖ್ಯಸ್ಥರುಗಳ ಜೊತೆ ಸಂಪರ್ಕದಲ್ಲಿದ್ದು, ಶೀಘ್ರವಾಗಿ ಕಾರ್ಯಭಾರಕ್ಕನುಗುಣವಾಗಿ ಅಗತ್ಯವಾದ ಸಂಖ್ಯೆಯ ಅತಿಥಿ ಉಪನ್ಯಾಸಕರುಗಳನ್ನು ನೇಮಕಮಾಡಿಕೊಳ್ಳಲು ವಿವರಗಳನ್ನು ಪಡೆದು ಮುಂದಿನ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.

ಸಭೆಯು ಪ್ರಾರಂಭಗೊಳ್ಳುವ ಮುನ್ನ ಸಿಂಡಿಕೇಟ್ ಸದಸ್ಯರುಗಳು ಸಿಂಡಿಕೇಟ್ ಸಭಾಂಗಣದಲ್ಲಿ ಸಿ.ಸಿ.ಕ್ಯಾಮರಾವನ್ನು ಅಳವಡಿಸಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. ಸಿಂಡಿಕೇಟ್ ಸಭೆಯು ಗೌಪ್ಯ ಸಭೆಯಾಗಿದ್ದು, ಇಲ್ಲಿ ತೀರ್ಮಾನಿಸಲಾಗಿರುವ ನಿರ್ಣಯಗಳು ಸಭೆ ಮುಗಿದ ಮಾರನೆಯ ದಿನವೇ ವೃತ್ತ ಪತ್ರಿಕೆಗಳಲ್ಲಿ ಹಾಗೂ ನ್ಯೂಸ್ ಚಾನಲ್‌ಗಳಲ್ಲಿ ಭಿತ್ತರಗೊಳ್ಳುತ್ತಿದ್ದು, ಸಭೆಯ ಗೌಪ್ಯತೆಯೇ ಇಲ್ಲದಂತಾಗಿದೆ. ಆದುದರಿಂದ ಸಭೆ ನಡೆಯುವ ಜಾಗದಲ್ಲಿ ಸಿ.ಸಿ.ಕ್ಯಾಮರಾವನ್ನು ಅಳವಡಿಸದಂತೆ ಅಧ್ಯಕ್ಷರಲ್ಲಿ ಮನವಿ ಮಾಡಿದರು.

ಕುಲಸಚಿವರು(ಪರೀಕ್ಷಾಂಗ), ಇವರು ಮಾತನಾಡಿ, ಇಲ್ಲಿನ ಸಿ.ಸಿ.ಕ್ಯಾಮರಾದಲ್ಲಿನ ಚಿತ್ರಗಳು ಹೇಗೆ ಹೊರಗಿನವರಿಗೆ ತಲುಪಲು ಸಾಧ್ಯ? ಎಂಬುದರ ಬಗ್ಗೆ ಪರಿಶೀಲಿಸಿ, ತಪ್ಪಿತಸ್ಥರ ಮೇಲೆ ಶಿಸ್ತು ಕ್ರಮ ಕೈಗೊಳ್ಳುವಂತೆ ಕುಲಪತಿಗಳನ್ನು ಕೋರಿದರು.

ಸಿಂಡಿಕೇಟ್ ಸಭೆಯ ನಿರ್ಧಾರಗಳ ನಡಾವಳಿಗಳು ಗೌಪ್ಯವಾಗಿರಬೇಕೆಂದು, ಇದು ಹೊರಗಡೆ ಹೋಗದಂತೆ ಸೂಕ್ತ ಕ್ರಮಗಳನ್ನು ಕುಲಸಚಿವರು ಕೈಗೊಳ್ಳಬೇಕೆಂದು ಹಾಗೂ ಸಿ.ಸಿ.ಕ್ಯಾಮರಾ ದುರ್ಬಳಕೆಯಾಗಿರುವ ಬಗ್ಗೆ ತನಿಖೆ ನಡೆಸುವಂತೆ ಸಭೆಯು ಸೂಚಿಸಿತು.

ಅನಂತರ, ಸಿಂಡಿಕೇಟ್ ಸಭಾಂಗಣದಲ್ಲಿನ ಸಿ.ಸಿ.ಕ್ಯಾಮರಾವನ್ನು ಸ್ವಿಚ್‌ಆಫ್ ಮಾಡಿಸಲಾಯಿತು.

ಶ್ರೀ ಎಂ.ಎಸ್.ಎಸ್.ಕುಮಾರ್‌ರವರು ಮಾತನಾಡಿ, ದಿನಾಂಕ 25–03–2017 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ 3ನೇ ಸಿಂಡಿಕೇಟ್ ಸಭೆಯ ನಡಾವಳಿಗಳು ಸಭೆ ನಡೆದು 3 ತಿಂಗಳುಗಳಾಗಿದ್ದರೂ ಇದುವರೆವಿಗೂ ಸದಸ್ಯರ ಕೈಸೇರಿಲ್ಲದಿರುವುದರಿಂದ ಈ ಸಭೆಯನ್ನು ಮುಂದುವರೆಸುವುದು ಬೇಡ. ಹಿಂದಿನ ಸಭೆಯ ನಡಾವಳಿಗಳು ಬಂದ ನಂತರ ಸಭೆ ನಡೆಸಬೇಕೆಂದು ಅಧ್ಯಕ್ಷರನ್ನು ಕೋರಿದರು. ಸಿಂಡಿಕೇಟ್ ಸದಸ್ಯರಾದ ಶ್ರೀ ಮಹಮದ್ ಅಬ್ದುಸ್ಸಲಾಂ ಹಾಗೂ ಶ್ರೀ ಕುಮಾರ್‌ರವರುಗಳು ಸಹ ಈ ಪ್ರಸ್ತಾವನೆಗೆ ಧ್ವನಿಗೂಡಿಸಿದರು.

ನಂತರ ಅಧ್ಯಕ್ಷರು ಮಾತನಾಡುತ್ತಾ 3ನೇ ಸಾಮಾನ್ಯ ಸಭೆಯ ನಡಾವಳಿಗಳು ಕೆಲವು ಕಾರಣಗಳಿಂದಾಗಿ ಅಂತಿಮಗೊಳಿಸಲಾಗಿರುವುದಿಲ್ಲ. ಆದ್ದರಿಂದ ನಡಾವಳಿಯು ತಲುಪದೇ ಇರುವುದಕ್ಕೆ ಕ್ಷಮೆಯಾಚಿಸಿ, ದಿನಾಂಕ 25–03–2017ರಂದು ನಡೆದ ನಡೆವಳಿಯ ಪ್ರತಿಗೆ ತಾವು ಸಹಿಮಾಡಿ ಕುಲಸಚಿವರಿಗೆ ಕಳುಹಿಸಿಕೊಡಲಾಗಿತ್ತು. ಆದರೆ ಕುಲಸಚಿವರು ಅದನ್ನು ಸಹಿಮಾಡದೇ ಅಂತಿಮಗೊಳಿಸಿರುವುದಿಲ್ಲ. ಆದ್ದರಿಂದ ಅದರ ಪ್ರತಿಯನ್ನು ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ ನೀಡಲಾಗುವುದು. ಸದಸ್ಯರು ಕೂಲಂಕಷವಾಗಿ ಓದಿ ಅನುಮೋದಿಸಬೇಕೆಂದು ತಿಳಿಸಿ ನಡಾವಳಿಯ ಪ್ರತಿಯನ್ನು ಸದಸ್ಯರೆಲ್ಲರಿಗೂ ನೀಡಿದರು.

ಎಲ್ಲಾ ಸದಸ್ಯರುಗಳ ಸಮ್ಮತಿ ಮತ್ತು ಅಧ್ಯಕ್ಷರ ಅಣತಿಯಂತೆ ದಿನಾಂಕ 25–03–2017ರ ಸಿಂಡಿಕೇಟ್‌ನಲ್ಲಿ ತೆಗೆದುಕೊಂಡ ವಿಷಯವಾರು ನಿರ್ಣಯಗಳನ್ನು ಸಭೆಯಲ್ಲಿ ಪರಿಶೀಲಿಸಲಾಯಿತು.

ವಿಷಯ ಸಂಖ್ಯೆ 3.12ರಲ್ಲಿ ಶ್ರೀ ಎಂ.ರಘುಶಂಕರ, ಸೇವಕ, ಆಡಳಿತಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಕಛೇರಿಗೆ ಪದೇ ಪದೇ ಗೈರು ಹಾಜರಾಗುತ್ತಿರುವ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಲಯನ್ ರಮೇಶ್ ರವರು ಆಕ್ಷೇಪಿಸಿ, ಸದರಿಯವರ ಮೇಲೆ ಶಿಸ್ತು ಕ್ರಮ ಜರುಗಿಸಬೇಕೆಂದರು.

ಮಾನ್ಯ ಕುಲಸಚಿವರು ಮಾತನಾಡಿ, ಕೆ.ಸಿ.ಎಸ್.ಆರ್.ನಿಯಮದ ಪ್ರಕಾರ ಸದರಿರವರ ವಿರುದ್ಧ ನಿಯಮಾನುಸಾರ ಕ್ರಮವನ್ನು ಕೈಗೊಳ್ಳಲಾಗುವುದೆಂದರು.

ವಿಷಯ ಸಂಖ್ಯೆ 3.9ಕ್ಕೆ ಸಂಬಂಧಿಸಿದಂತೆ ತೆಗೆದುಕೊಂಡಿರುವ ನಿರ್ಣಯದ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಎಂ.ಎಸ್.ಎಸ್.ಕುಮಾರ್ ಮತ್ತು ಶ್ರೀಮಹಮದ್ ಅಬ್ದುಸ್ಸಲಾಂ ಅವರು ಆಕ್ಷೇಪ ವ್ಯಕ್ತಪಡಿಸಿದರು.

ಮುಂದುವರೆದು ಮಾತನಾಡುತ್ತಾ, ಶ್ರೀ ಶಿವಲಿಂಗ ಪ್ರಸಾದ್ ಮತ್ತು ಶ್ರೀ ಮಂಜಪ್ಪ ಇವರುಗಳಿಗೆ ಪದೋನ್ನತಿ ನೀಡಿರುವ ಸಂಪೂರ್ಣ ವಿವರಗಳನ್ನು ಸಿಂಡಿಕೇಟ್‌ನಲ್ಲಿ ಮಂಡಿಸದೇ ಶ್ರೀ ಎಸ್.ಎ. ಉಮೇಶ್, ಸಹಾಯಕ ಅಭಿಯಂತರರು ಇವರಿಗೆ ದಿನಾಂಕ 1–8–2006ರಿಂದ ಜಾರಿಗೆ ಬಂದಂತೆ ಕಿರಿಯ ಅಭಿಯಂತರರ ಹುದ್ದೆಯಿಂದ ಸಹಾಯಕ ಅಭಿಯಂತರರ ಹುದ್ದೆಗೆ ಮಾರ್ಪಾಡಾಗಿರುವುದನ್ನು ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ಶ್ರೀ ಎಂ.ಎಸ್.ಎಸ್.ಕುಮಾರ್‌ರವರು ಅಭಿಪ್ರಾಯಿಸಿದರು ಮತ್ತು ಶ್ರೀ ಮಹಮದ್ ಅಬ್ದುಸ್ಸಲಾಂ ಅವರು ಅಭಿಪ್ರಾಯವನ್ನು ಅನುಮೋದಿಸಿದರು.

ವಿಷಯಸಂಖ್ಯೆ 2017/3.24 ಡಾ. ವೆಂಕಟೇಶ್ ಕುಮಾರ್.ಜಿ, ಪ್ರಾಧ್ಯಾಪಕರು, ಮನೋವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರು ಸಲ್ಲಿಸಿರುವ ಉತ್ತರವನ್ನು ಪರಿಶೀಲಿಸಿದ ಸಭೆಯು ಈಗಾಗಲೇ ವಿಭಾಗದ ಅಧ್ಯಕ್ಷ ಸ್ಥಾನವನ್ನು ಹಿಂಪಡೆಯಲಾಗಿದ್ದು ಅವರಿಗೆ ಅಂತಿಮ ಎಚ್ಚರಿಕೆ ನೀಡಲು ಹಾಗೂ 2017/3.25ಕ್ಕೆ ಸಂಬಂಧಿಸಿದಂತೆ, ಡಾ. ಮಹೇಶ್ ಚಂದ್ರ ಗುರು, ಪ್ರಾಧ್ಯಾಪಕರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ವಿವಿಧ ಕಾರ್ಯಕ್ರಮಗಳಲ್ಲಿ ವಿವಾದಾತ್ಮಕ ಹೇಳಿಕೆಯನ್ನು ನೀಡುವ ಸಂಬಂಧ ಆರೋಪಪಟ್ಟಿ ಜಾರಿಗೊಳಿಸಿದ್ದು ಸದರಿಯವರು ಸಲ್ಲಿಸಿರುವ ಉತ್ತರವನ್ನು ಪರಿಶೀಲಿಸಿದ ಸಭೆಯು ಮುಂದೆ ಯಾವುದೇ ತೆರನಾದ ಆರೋಪಗಳಿಗೆ ಆಸ್ಪದ ನೀಡದಂತೆ ಎಚ್ಚರಿಕೆ ನೀಡಿರುವ ನಿರ್ಣಯಗಳನ್ನು ಸಿಂಡಿಕೇಟ್ ಪರಿಶೀಲಿಸಿತು.

ಅಂತಿಮವಾಗಿ ಈ ಕೆಳಕಂಡ ವಿಷಯಗಳಿಗೆ ತಿದ್ದುಪಡಿ ಮಾಡಲಾದ ತೀರ್ಮಾನಗಳನ್ನು ಸೇರಿಸಿ ಮಾನ್ಯ ಕುಲಪತಿಗಳು ತಮ್ಮ ಸಹಿಯೊಡನೆ ಅನುಮೋದಿಸಿ ನಡಾವಳಿಯನ್ನು ಕೂಡಲೇ ಸದಸ್ಯರೆಲ್ಲರಿಗೂ ಕಳುಹಿಸಿಕೊಡುವಂತೆ ಸಿಂಡಿಕೇಟ್ ತೀರ್ಮಾನಿಸಿತು.

| | |
|---|---|
| **2017/3.9** | ಶ್ರೀ ಎಸ್.ಎ. ಉಮೇಶ್, ಸಹಾಯಕ ಅಭಿಯಂತರರು, ಇವರಿಗೆ ದಿನಾಂಕ 1–8–2006ರಿಂದ ಜಾರಿಗೆ ಬಂದಂತೆ ಕಿರಿಯ ಅಭಿಯಂತರರ ಹುದ್ದೆಯಿಂದ ಸಹಾಯಕ ಅಭಿಯಂತರರ ಹುದ್ದೆಗೆ ಮಾರ್ಪಡಿಸಿರುವ ಕುರಿತು ಮಾಹಿತಿಯನ್ನು ಮಂಡಿಸುತ್ತಿರುವ ಬಗ್ಗೆ. |
| **ತೀರ್ಮಾನ** | ಕುಲಸಚಿವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರುಗಳೊಂದಿಗೆ ಸಿಂಡಿಕೇಟ್ ಉಪಸಮಿತಿಯನ್ನು ರಚಿಸಿ ಇಂತಹುದೆ ಇನ್ನಾವುದೇ ಪ್ರಕರಣಗಳಿದ್ದರೂ ಅವುಗಳನ್ನು ಪರಿಶೀಲಿಸಿ ಸಂಪೂರ್ಣ ವರದಿಯೊಂದಿಗೆ ಮುಂದಿನ ಸಿಂಡಿಕೇಟ್‌ನಲ್ಲಿ ಮರುಮಂಡಿಸಲು ಸಿಂಡಿಕೇಟ್‌ನಲ್ಲಿ ತೀರ್ಮಾನಿಸಲಾಯಿತು.<br><br>1) ಕುಲಸಚಿವರು – ಅಧ್ಯಕ್ಷರು<br>2) ಹಣಕಾಸು ಅಧಿಕಾರಿಗಳು – ಸದಸ್ಯರು<br>3) ಪ್ರೊ. ಡಿ. ನಂಜುಂಡಯ್ಯ – ಸದಸ್ಯರು<br>4) ಶ್ರೀ ಎಂ.ಎಸ್.ಎಸ್.ಕುಮಾರ್ – ಸದಸ್ಯರು<br>5) ಶ್ರೀ ಮಹಮದ್ ಅಬ್ದುಸ್ಸಲಾಂ – ಸದಸ್ಯರು<br>6) ಉಪಕುಲಸಚಿವ (ಸಾಮಾನ್ಯ) – ಸಂಚಾಲಕರು |

| | |
|---|---|
| **2017/3.24** | Explanation submitted by Dr. Venkatesh Kumar G., Professor, Department of Studies in Psychology, Manasagangotri, Mysore, against the Charge Sheet - Reg |
| **ತೀರ್ಮಾನ** | ಸುದೀರ್ಘ ಚರ್ಚೆಯ ನಂತರ ವಿಶ್ವವಿದ್ಯಾನಿಲಯದ ಆರೋಪ ಪಟ್ಟಿಗೆ ಡಾ. ವೆಂಕಟೇಶ್ ಕುಮಾರ್ ಜಿ., ಪ್ರಾಧ್ಯಾಪಕರು, ಮನೋವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಸಲ್ಲಿಸಿರುವ ಉತ್ತರವನ್ನು ಪರಿಶೀಲಿಸಿ ಪರಿಗಣಿಸಿದ ಸಿಂಡಿಕೇಟ್ ಈಗಾಗಲೇ ಸದರಿಯವರಿಗೆ ವಿಭಾಗದ ಅಧ್ಯಕ್ಷ ಸ್ಥಾನವನ್ನು ಹಿಂಪಡೆದಿರುವುದರಿಂದ ಇನ್ನು ಮುಂದೆ ಯಾವುದೇ ತೆರನಾದ ಆರೋಪಗಳಿಗೆ ಆಸ್ಪದ ನೀಡದಂತೆ ಸಿಸಿಎ ನಿಯಮ 5(1)(ii)ರ ಅನ್ವಯ ನಿಯಮಾನುಸಾರ ಕ್ರಮ ಜರುಗಿಸಿ ಪ್ರಕರಣವನ್ನು ಮುಕ್ತಾಯಗೊಳಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/3.25** | Explanation Submitted by Dr. Mahesh Chandra Guru, Professor, Department of Studies in Mass Comminication and Journalism, Manasagangotri, Mysuru, against the Charge Sheet - Reg |
| **ತೀರ್ಮಾನ** | ಸುದೀರ್ಘ ಚರ್ಚೆಯ ನಂತರ ವಿಶ್ವವಿದ್ಯಾನಿಲಯದ ಆರೋಪ ಪಟ್ಟಿಗೆ ಡಾ. ಮಹೇಶ್ ಚಂದ್ರ ಗುರು, ಪ್ರಾಧ್ಯಾಪಕರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಸಲ್ಲಿಸಿರುವ ಉತ್ತರವನ್ನು ಪರಿಶೀಲಿಸಿ ಪರಿಗಣಿಸಿದ ಸಿಂಡಿಕೇಟ್ ಇನ್ನು ಮುಂದೆ ಯಾವುದೇ ತೆರನಾದ ವಿವಾದಾತ್ಮಕ ಹೇಳಿಕೆಗಳನ್ನು ನೀಡಬಾರದೆನ್ನುವ ದೃಷ್ಟಿಯಿಂದ ಸಿಸಿಎ ನಿಯಮ 5(1)(ii)ರ ಅನ್ವಯ ನಿಯಮಾನುಸಾರ ಕ್ರಮ ಜರುಗಿಸಿ ಪ್ರಕರಣವನ್ನು ಮುಕ್ತಾಯಗೊಳಿಸಲು ಸಿಂಡಿಕೇಟ್ ತೀರ್ಮಾನಿಸಿತು. |

ಉಳಿದಂತೆ 23–03–2017ರ ನಡಾವಳಿಯ ನಿರ್ಣಯಗಳನ್ನು ಸಿಂಡಿಕೇಟ್ ಅನುಮೋದಿಸಿತು.

ನಂತರ ಮಾನ್ಯ ಕುಲಪತಿಗಳು ಮಾತನಾಡಿ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ 133ನೇ ಜಯಂತಿಯನ್ನು ಪ್ರಥಮ ಬಾರಿಗೆ ಕ್ರಾಫರ್ಡ್‌ಭವನದಲ್ಲಿ ಆಚರಿಸಲಾಗಿದ್ದು, ಕೆಲವು ವಿಶ್ವವಿದ್ಯಾನಿಲಯಗಳು ತಮ್ಮ ಹೆಸರನ್ನು ಪುನರ್‌ನಾಮಕರಣಗೊಂಡಿರುವ ರೀತಿಯಲ್ಲಿಯೇ (ಉದಾ. ಅಕ್ಕಾಮಹಾದೇವಿ, ಅಮೇರಿಕಾ ವಿಶ್ವವಿದ್ಯಾನಿಲಯ) ಮೈಸೂರು ವಿಶ್ವವಿದ್ಯಾನಿಲಯದ ಹೆಸರನ್ನು **"ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರು ವಿಶ್ವವಿದ್ಯಾನಿಲಯ"** ಎಂದು **ಪುನರ್‌ನಾಮಕರಣ ಮಾಡುವುದು** ಸೂಕ್ತವೆಂದು, ಇದರ ಬಗ್ಗೆ ಸದಸ್ಯರುಗಳೆಲ್ಲರೂ ಒಮ್ಮತದ ಅಭಿಪ್ರಾಯವನ್ನು ನೀಡಬೇಕೆಂದರು.

ಪ್ರೊ ಜೆ.ಸೋಮಶೇಖರ್, ಕುಲಸಚಿವ (ಪರೀಕ್ಷಾಂಗ) ಅವರು ಮಾತನಾಡುತ್ತಾ, ರಾಜವಂಶಸ್ಥರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರೇ ಈ ಪ್ರಾಂತ್ಯದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸ್ಥಳಾವಕಾಶ ನೀಡಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿ ಅದಕ್ಕೆ ಮೈಸೂರು ವಿಶ್ವವಿದ್ಯಾನಿಲಯವೆಂದು ಅವರೇ ನಾಮಕರಣ ಮಾಡಿರುವುದರಿಂದ ಪುನಃ ಅದನ್ನು ಬದಲಾವಣೆ ಮಾಡುವುದು ಸರಿಯಲ್ಲವೆಂದರು.

ಮಾನ್ಯ ಸದಸ್ಯರುಗಳಾದ ಶ್ರೀ ಕುಮಾರ್, ಶ್ರೀಮತಿ ಶ್ರುತಿ ತರುಣ್‌ಗಿರಿ, ಪ್ರೊ ನಂಜುಂಡಯ್ಯನವರು, ಶ್ರೀ ಲಯನ್ ಹೆಚ್. ರಮೇಶ್‌ರವರು, ಶ್ರೀ ಎಂ.ಎಸ್.ಎಸ್. ಕುಮಾರ್‌ರವರುಗಳು ಪ್ರೊ. ಜೆ. ಸೋಮಶೇಖರ್, ಕುಲಸಚಿವ (ಪರೀಕ್ಷಾಂಗ) ಅವರ ಅಭಿಪ್ರಾಯವನ್ನು ಅನುಮೋದಿಸಿದರು.

ನಂತರ ಮಾತನಾಡಿದ ಮಾನ್ಯ ಕುಲಪತಿಯವರು, ನಾಮಕರಣ ಮಾಡುವ ಬಗ್ಗೆ ಒಂದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ, ತದನಂತರ ತೀರ್ಮಾನವನ್ನು ತೆಗೆದುಕೊಳ್ಳೋಣವೆಂದರು.

ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪನೆಯಾಗಿ ಈಗಾಗಲೇ 100 ವರ್ಷಗಳು ಕಳೆದಿರುವುದರಿಂದ, ಹಾಗೂ ಮೈಸೂರು ವಿಶ್ವವಿದ್ಯಾನಿಲಯವು ಆ ಹೆಸರಿನಲ್ಲಿಯೇ ಪ್ರಸಿದ್ಧಿಯನ್ನು ಹೊಂದಿರುವುದರಿಂದ, ಪುನಃ ಹೆಸರನ್ನು ಬದಲಾವಣೆ ಮಾಡುವುದು ಅಷ್ಟು ಸೂಕ್ತವಲ್ಲವೆಂದು ಕುಲಸಚಿವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ನಂತರ ಸಿಂಡಿಕೇಟ್ ಸಭೆಯು, ಮೈಸೂರು ವಿಶ್ವವಿದ್ಯಾನಿಲಯ ಎಂದು ನಾಲ್ವಡಿ ಕೃಷ್ಣರಾಜ ಒಡೆಯರ್‌ರವರೇ ನಾಮಕರಣ ಮಾಡಿರುವುದರಿಂದ ಅವರ ಹೆಸರು ನಾಡಿನ ಜನರ ಮನದಲ್ಲಿ ಚಿರಸ್ಥಾಯಿಯಾಗಿರುವುದರಿಂದ ಪುನಃ 'ಮೈಸೂರು ವಿಶ್ವವಿದ್ಯಾನಿಲಯ'ವನ್ನು 'ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರು ವಿಶ್ವವಿದ್ಯಾನಿಲಯ'ವೆಂದು ನಾಮಕರಣ ಮಾಡುವುದು ಸೂಕ್ತವಲ್ಲವೆಂಬ ನಿರ್ಣಯಕ್ಕೆ ಒಮ್ಮತದಿಂದ ಅನುಮೋದನೆಯನ್ನು ನೀಡಿತು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| 2017/6.1 | ಡಾ. ಯಜುರ್ವೇದಿ ಎಚ್.ಎನ್. ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು ಇವರಿಗೆ ಯು.ಎಸ್.ಎ.ಗೆ ತೆರಳಲು ಅನುಮತಿ ನೀಡಿರುವ ಬಗ್ಗೆ – ಅನುಸಮರ್ಥನೆಗಾಗಿ. |
| ತೀರ್ಮಾನ | ಡಾ. ಯಜುರ್ವೇದಿ ಎಚ್.ಎನ್. ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು ಇವರು ಸ್ನಾತಕೋತ್ತರ ವಿಭಾಗಗಳ ಶೈಕ್ಷಣಿಕ ಕ್ಯಾಲೆಂಡರ್‌ನ ಅನುಸಾರ ಇರುವ ಬೇಸಿಗೆ ಬಿಡುವಿನ ರಜಾದಿನಗಳನ್ನು ಉಪಯೋಗಿಸಿಕೊಂಡು ದಿನಾಂಕ 21–05–2017ರಿಂದ 10–06–2017ರವರೆಗೆ ವಿಶ್ವವಿದ್ಯಾನಿಲಯದ ಮೇಲೆ ಯಾವ ಆರ್ಥಿಕ ಹೊಣೆಗಾರಿಕೆಯೂ ಇಲ್ಲದಂತೆ ಯು.ಎಸ್.ಎ.ಗೆ ತೆರಳಲು ಅನುಮತಿ ನೀಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2017/6.2 | ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಭದ್ರತಾ ಸಂಸ್ಥೆಯನ್ನು ನೇಮಕ ಮಾಡಲು ನಿಯಮಾನುಸಾರ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲು ಕ್ರಮಕೈಗೊಂಡಿರುವ ಬಗ್ಗೆ – ಅನುಸಮರ್ಥನೆಗಾಗಿ. |

| | |
|---|---|
| ತೀರ್ಮಾನ | ಅರ್ಹ ಗುತ್ತಿಗೆದಾರರಿಂದ/ಏಜೆನ್ಸಿಸ್‌ರವರಿಂದ 01 ಸೆಕ್ಯೂರಿಟಿ ಸೂಪರ್‌ವೈಸರ್, 95 ಮಂದಿ ಸೆಕ್ಯೂರಿಟಿಗಾರ್ಡ್ ಹಾಗೂ 25 ಮಂದಿ ಶಸ್ತ್ರಸಜ್ಜಿತ ಸೆಕ್ಯೂರಿಟಿಗಾರ್ಡ್(Gun-man)ಗಳನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಒದಗಿಸಲು ದಿನಾಂಕ 15–5–2017ರಂದು ಟೆಂಡರ್ ಆಹ್ವಾನಿಸಿರುವ ಬಗೆಗಿನ ಹಾಗೂ ಸದರಿ ಟೆಂಡರ್‌ಗೆ ದಿನಾಂಕ 17–6–2017ರಂದು ತಿದ್ದುಪಡಿ ಟೆಂಡರ್ ಪ್ರಕಟಣೆ ನೀಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2017/6.3 | ಜೈವಿಕತಂತ್ರಜ್ಞಾನ ಅಧ್ಯಯನ ವಿಭಾಗದಲ್ಲಿ ಕಾರ್ಯಗತಗೊಂಡಿರುವ ಐಸಿಎಆರ್ ಡಿಎಂಆರ್‌ಎಲ್ ಯೋಜನೆಯಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು 2017–18ನೇ ಸಾಲಿನಿಂದ 2019–20ನೇ ಸಾಲಿನವರೆಗೆ ಮುಂದುವರಿಸುವ ಬಗ್ಗೆ. |
| ತೀರ್ಮಾನ | ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದಲ್ಲಿ ಕಾರ್ಯಗತಗೊಂಡಿರುವ ಐಸಿಎಆರ್–ಡಿಎಂಆರ್‌ಎಲ್ ಯೋಜನೆಯಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಖಾಯಂ ಉದ್ಯೋಗಿಗಳಿಗೆ ನೀಡಲಾಗುವ ಕೆಲವು ಸೇವಾಸವಲತ್ತುಗಳನ್ನು ವಿಸ್ತರಿಸಬೇಕಾಗಿರುವುದರಿಂದ ಸದರಿ ಯೋಜನೆಯಲ್ಲಿರುವ ಸಿಬ್ಬಂದಿಗಳ ವಿದ್ಯಾರ್ಹತೆ, ಜಾತಿವಾರು ವೃಂದ ಹಾಗೂ ನೇಮಕಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಅಳವಡಿಸಲಾಗಿದೆಯೇ ಎಂಬುದರ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ತೀರ್ಮಾನವನ್ನು ಕೈಗೊಳ್ಳುವ ಸಲುವಾಗಿ ಸದರಿ ವಿಷಯವನ್ನು ಮುಂದಿನ ಸಭೆಯಲ್ಲಿ ಸಂಪೂರ್ಣ ವಿವರಗಳೊಡನೆ ಮರುಮಂಡಿಸುವಂತೆ ಸೂಚಿಸಿ, ಸದರಿ ವಿಷಯವನ್ನು ಮುಂದೂಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2017/6.4 | MHRD ಯವರು ಹೊರತಂದಿರುವ ಭಾರತವಾಣಿ ಎಂಬ ಪೋರ್ಟಲ್ ಮತ್ತು ಆಪ್‌ಗಳ ಮೂಲಕ ಅಂತರ್ಜಾಲದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆಗಳನ್ನು ಹೊರಡಿಸುವ ಸಂಬಂಧ CIIL, Mysore ಅವರೊಂದಿಗೆ 2ನೇ Deed of Assignment (DOA) ಮಾಡಿಕೊಳ್ಳುವ ಬಗ್ಗೆ. |
| ತೀರ್ಮಾನ | MHRD ಯವರು ಹೊರತಂದಿರುವ ಭಾರತವಾಣಿ ಎಂಬ ಪೋರ್ಟಲ್ ಮತ್ತು ಆಪ್‌ಗಳ ಮೂಲಕ ಅಂತರ್ಜಾಲದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆಗಳನ್ನು ಹೊರಡಿಸುವ ಸಂಬಂಧ CIIL, Mysore ಅವರೊಂದಿಗೆ 2ನೇ Deed of Assignment (DOA) ಮಾಡಿಕೊಳ್ಳುವ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಮತ್ತಷ್ಟು ಮಾಹಿತಿಗಳೊಡನೆ ಚರ್ಚಿಸಿ ನಿರ್ಧರಿಸಬೇಕಾಗಿರುವುದರಿಂದ ಸದರಿ ವಿಷಯವನ್ನು ಮುಂದೂಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2017/6.5 | ಡಾ. ಪಿ. ಪ್ರಕಾಶ್, ಪ್ರಾಧ್ಯಾಪಕರು, ಮನೋವಿಜ್ಞಾನ ಅಧ್ಯಯನ ವಿಭಾಗ ಅವರನ್ನು 2017ನೇ ಕ್ಯಾಲೆಂಡರ್ ವರ್ಷದಲ್ಲಿ ಸೇವೆಯಿಂದ ನಿವೃತ್ತರಾಗಲು ಅನುಮತಿಸುವ ಬಗ್ಗೆ. |
| ತೀರ್ಮಾನ | 2017ರ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದುವವರ ಪಟ್ಟಿಯನ್ನು ಅನುಮೋದಿಸಿ ದಿನಾಂಕ 8–11–2016ರಂದು ಈಗಾಗಲೇ ಆದೇಶ ಹೊರಡಿಸಿದ್ದು ಹಣಕಾಸು ಅಧಿಕಾರಿಗಳು ಒದಗಿಸಿದ ಮಾಹಿತಿಯ ಆಧಾರದ ಮೇಲೆ ಸದರಿ ಪಟ್ಟಿಯಲ್ಲಿ ಡಾ. ಪಿ. ಪ್ರಕಾಶ್, ಪ್ರಾಧ್ಯಾಪಕರು, ಮನೋವಿಜ್ಞಾನ ಅಧ್ಯಯನ ವಿಭಾಗ ಇವರ ಹೆಸರು ಬಿಟ್ಟುಹೋಗಿರುವುದನ್ನು ಪರಿಗಣಿಸಿದ ಸಿಂಡಿಕೇಟ್ 2017ನೇ ಕ್ಯಾಲೆಂಡರ್ ವರ್ಷದಲ್ಲಿ 31–12–2017ರಂದು ಸೇವೆಯಿಂದ ನಿವೃತ್ತಿ ಹೊಂದಲು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| 2017/6.6 | ಶ್ರೀ ಮಣಿ, ಹೆಲ್ಪರ್, ಪ್ರಸಾರಾಂಗ ಇವರು ಕಾಣೆಯಾಗಿರುವ ಬಗ್ಗೆ. |
| ತೀರ್ಮಾನ | ಶ್ರೀ ಮಣಿ, ಹೆಲ್ಪರ್, ಪ್ರಸಾರಾಂಗ ಇವರು ಅನುಕಂಪದ ಆಧಾರದ ಮೇಲೆ ಹೆಲ್ಪರ್ ಹುದ್ದೆಯಲ್ಲಿ ದಿನಾಂಕ 3-2-1994ರಂದು ಖಾಯಂ ಆಗಿ ನೇಮಕಗೊಂಡಿದ್ದು ಸದರಿಯವರು ದಿನಾಂಕ 25-08-2009ರಿಂದ ಕಾಣೆಯಾಗಿದ್ದು ಒಂದು ವರ್ಷದ ನಂತರ 8-12-2010ರ ಪತ್ರದಲ್ಲಿ ಜಯಲಕ್ಷ್ಮಿಪುರಂ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್‌ರವರು ಪ್ರಕರಣದ ತನಿಖೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ ಎಂದು ನೀಡಿರುವ ಪತ್ರವನ್ನು ಪರಿಶೀಲಿಸಿದ ಸಿಂಡಿಕೇಟ್ ಶ್ರೀ ಮಣಿ, ಹೆಲ್ಪರ್, ಪ್ರಸಾರಾಂಗ ಕಾಣೆಯಾಗಿರುವ ಪ್ರಯುಕ್ತ, ಕೆ.ಸಿ.ಎಸ್.ಆರ್.ನಿಯಮದ ಪ್ರಕಾರ ಸಿಗುವ ಸವಲತ್ತುಗಳನ್ನು ನಿಯಮಾನುಸಾರ ಅವರ ಕುಟುಂಬವರ್ಗದವರಿಗೆ ಮಂಜೂರು ಮಾಡಲು ಸಿಂಡಿಕೇಟ್ ಅನುಮತಿಸಿತು. |
| 2017/6.7 | ಶ್ರೀಮತಿ ಪದ್ಮ, ಪರಿಚಾರಕಿ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಸ್ವಯಂ ನಿವೃತ್ತಿ ಪಡೆಯಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ಶ್ರೀಮತಿ ಪದ್ಮ, ಪರಿಚಾರಕಿ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ 31.07.2017ರಿಂದ ಅನ್ವಯವಾಗುವಂತೆ ಸ್ವಯಂ ನಿವೃತ್ತಿ ಹೊಂದಲು ಇಚ್ಛಿಸಿರುವುದರಿಂದ, ಮೈಸೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ (ಸೇವಾ ಷರತ್ತು) ಮಾರ್ಪಡಿಸಿದ ಅಧಿನಿಯಮಗಳು 1984ರ ಪ್ರಕಾರ ಹಾಗೂ ಕೆ.ಸಿ.ಎಸ್.ಆರ್ ನಿಯಮ 285(1) (ಎ)ರ ಪ್ರಕಾರ ಸದರಿಯವರು ದಿನಾಂಕ 31.07.2017ರಿಂದ ಅನ್ವಯವಾಗುವಂತೆ ಸ್ವಯಂ ನಿವೃತ್ತಿ ಹೊಂದಲು ಸಿಂಡಿಕೇಟ್ ಅನುಮತಿಸಿತು. |
| 2017/6.8 | ಮೈಸೂರು ವಿಶ್ವವಿದ್ಯಾನಿಲಯದ Centre for Geo informatics Technological Studies ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಮತ್ತು ಸಾಂಸ್ಕೃತಿಕ ಹಾಗೂ ತಾಂತ್ರಿಕ ವಿಷಯಗಳಲ್ಲಿ ವಿನಿಮಯ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಒದಗಿಸುವ ಉದ್ದೇಶದಿಂದ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ. |
| ತೀರ್ಮಾನ | ವಿಭಾಗ ಅಧ್ಯಕ್ಷರೊಡನೆ ಕುಲಸಚಿವರು ಚರ್ಚಿಸಿ ಸಂಪೂರ್ಣ ವಿವರಗಳೊಂದಿಗೆ ಮರುಮಂಡಿಸುವ ಸಲುವಾಗಿ ಮುಂದೂಡಲಾಯಿತು. |
| 2017/6.9 | ವಿದ್ಯಾರ್ಥಿನಿ ಕು. ರವೀನಾ ಆರ್, ಇವರ ಬಿ.ಕಾಂ ಐದನೇ ಸೆಮಿಸ್ಟರಿನ Financial Management ಪತ್ರಿಕೆಯನ್ನು ಅಸಮರ್ಪಕವಾಗಿ ಮೌಲ್ಯಮಾಪನ ಮಾಡಿರುವ ಬಗ್ಗೆ. |
| ತೀರ್ಮಾನ | 1. ವಿದ್ಯಾರ್ಥಿನಿ ಕು.ರವೀನಾ ಆರ್. ಇವರ ಬಿ.ಕಾಂ ಐದನೇ ಸೆಮಿಸ್ಟರಿನ Financial Management ಪತ್ರಿಕೆಯನ್ನು ಅಸಮರ್ಪಕವಾಗಿ ಮೌಲ್ಯಮಾಪನ ಮಾಡಿದ ಮೌಲ್ಯಮಾಪಕರಾದ ಶ್ರೀ ಅನಿಲ್ ಕುಮಾರ್ ರವರು ಬೇಜವಾಬ್ದಾರಿ ಕಾರ್ಯ ನಿರ್ವಹಿಸಿದ ಹಿನ್ನೆಲೆಯಲ್ಲಿ, ಸದರಿಯವರಿಂದ 3 ವರ್ಷಗಳ ಕಾಲ ಮೌಲ್ಯಮಾಪನ ಕಾರ್ಯ ನಿರ್ವಹಿಸದಂತೆ ಕ್ರಮಕೈಗೊಳ್ಳಲು ಸಿಂಡಿಕೇಟ್ ನಿರ್ಧರಿಸಿತು.<br>2. ವಿದ್ಯಾರ್ಥಿನಿ ಕು. ರವೀನಾ ಆರ್. ರವರ ಬಿಕಾಂ ಐದನೇ ಸೆಮಿಸ್ಟರಿನ ಮೂರು ಮರು ಮೌಲ್ಯಮಾಪನ ನಡೆಸಿ, ಬಂದ ಸರಾಸರಿ (9+19=28, 28/2=14) ಅಂಕಗಳನ್ನು ಮರುಮೌಲ್ಯಮಾಪನದ ಫಲಿತಾಂಶದಲ್ಲಿ ಪ್ರಕಟಿಸಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. |
| 2017/6.10 | "The Statutes relating to the grant of Sabbatical Leave to the teachers of Mysore University (Revised) 2016" ಅಧಿನಿಯಮಕ್ಕೆ ಘನತೆವೆತ್ತ ಕುಲಾಧಿಪತಿಯವರು ಅನುಮೋದನೆ ನೀಡಿರುವ ಬಗ್ಗೆ. |
| ತೀರ್ಮಾನ | ಘನತೆವೆತ್ತ ಕುಲಾಧಿಪತಿಯವರಿಂದ ಅನುಮೋದನೆಗೊಂಡಿರುವ The Statutes relating to the grant of Sabbatical Leave to the teachers of Mysore University (Revised) 2016" ಅಧಿನಿಯಮವನ್ನು ಪ್ರಕಟಿಸಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| 2017/6.11 | ಮೈಸೂರು ವಿಶ್ವವಿದ್ಯಾನಿಲಯವು University 18 Trust, Gurgaon and SBI ಇವರುಗಳೊಂದಿಗೆ Triparty MOUನ್ನು ಮಾಡಿಕೊಂಡಿರುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯವು ಆನ್‌ಲೈನ್ ಕೋರ್ಸುಗಳ ಸಂಬಂಧದಲ್ಲಿನ ಶುಲ್ಕಗಳನ್ನು ನಿರ್ವಹಿಸಲು ಹೆಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ Escrow ಖಾತೆಯನ್ನು ತೆರೆದಿರುವ ಬಗ್ಗೆ ಆಡಿಟ್ ಆಕ್ಷೇಪಣೆ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ, ಎಸ್‌ಬಿಐ ಬ್ಯಾಂಕಿನಲ್ಲಿ ಎಸ್‌ಕ್ರೋ ಖಾತೆಯನ್ನು ತೆರೆಯಲು ಮೈಸೂರು ವಿಶ್ವವಿದ್ಯಾನಿಲಯವು University 18 Trust, Gurgaon and SBI ಇವರುಗಳೊಂದಿಗೆ Triparty MOUನ್ನು ಮಾಡಿಕೊಂಡಿರುವುದನ್ನು ಸಭೆಯಲ್ಲಿ ಸ್ಥಿರೀಕರಿಸಲಾಯಿತು. |
| 2017/6.12 | ಪರೀಕ್ಷಾ ಕಾರ್ಯ ಚಟುವಟಿಕೆಗಳನ್ನು ಹೊರಗುತ್ತಿಗೆ ನೀಡಲು ಟೆಂಡರ್ ಆಹ್ವಾನಿಸುವ ಬಗ್ಗೆ. |
| ತೀರ್ಮಾನ | ಹಾಲಿ ಪರೀಕ್ಷಾ ಕಾರ್ಯಚಟುವಟಿಕೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನಿರ್ವಹಿಸುತ್ತಿರುವ ಮೆ: ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಥಾಣೆ, ಮಹಾರಾಷ್ಟ್ರ ಇವರ 3 ವರ್ಷಗಳ ಗುತ್ತಿಗೆ ಅವಧಿಯು ಮೇ/ಜೂನ್ 2017ರ ಪರೀಕ್ಷಾ ಕಾರ್ಯಚಟುವಟಿಕೆಗಳೊಂದಿಗೆ ಮುಕ್ತಾಯವಾಗಲಿರುವ ಹಿನ್ನೆಲೆಯಲ್ಲಿ, ನವೆಂಬರ್/ಡಿಸೆಂಬರ್ 2017ರ ಪರೀಕ್ಷಾ ಕಾರ್ಯಗಳನ್ನು ನಿರ್ವಹಣೆ ಮಾಡಲು ಇ-ಪೋರ್ಟಲ್ ಮೂಲಕ ಅರ್ಹ ಬಿಡ್‌ದಾರರಿಂದ BOOT ಮಾದರಿಯಲ್ಲಿ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿ ವಿಶ್ವವಿದ್ಯಾನಿಲಯದ ಉದ್ಯೋಗಿಗಳಿಗೆ ತರಬೇತಿ ನೀಡಿ ಅವಧಿ ಮುಗಿದ ನಂತರ ಅಭಿವೃದ್ಧಿಪಡಿಸಿದ ಸಾಫ್ಟ್‌ವೇರ್ ಅನ್ನು ಯಥಾವತ್ತಾಗಿ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಬೇಕೆನ್ನುವ ಷರತ್ತಿನೊಡನೆ ಟೆಂಡರ್ ಆಹ್ವಾನಿಸಲು ಸಿಂಡಿಕೇಟ್ ಒಮ್ಮತದಿಂದ ತೀರ್ಮಾನಿಸಿತು. |
| 2017/6.13 | ಉರ್ದು, ರೇಷ್ಮೆಕೃಷಿ ವಿಜ್ಞಾನ, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳನ್ನು ನೇಮಿಸಿರುವ ಬಗ್ಗೆ – ಅನುಸಮರ್ಥನೆಗಾಗಿ. |
| ತೀರ್ಮಾನ | ದೈನಂದಿನ ಶೈಕ್ಷಣಿಕ ಕಾರ್ಯಚಟುವಟಿಕೆಗಳು ಸುಲಲಿತವಾಗಿ ನಡೆಯಲು ಹಾಗೂ ಆಡಳಿತದ ಹಿತದೃಷ್ಟಿಯಿಂದ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಈ ಕೆಳಕಂಡ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷಕರುಗಳನ್ನು ನೇಮಕ ಮಾಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |

| ಕ್ರಮ ಸಂಖ್ಯೆ | ನೇಮಕಗೊಂಡ ವಿಭಾಗದ ಅಧ್ಯಕ್ಷರು | ಜಾರಿಗೆ ಬಂದ ದಿನಾಂಕ (ಎರಡು ವರ್ಷಗಳ ಅವಧಿ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ) |
|---|---|---|
| 1. | ಪ್ರೊ. ರಫತುನ್ನೀಸಾ ಬೇಗಂ<br>ಉರ್ದು ಅಧ್ಯಯನ ವಿಭಾಗ,<br>ಮಾಗಂ.,ಮೈಸೂರು | 01–06–2017 |
| 2. | ಪ್ರೊ.ಹೆಚ್.ಬಿ.ಮಂಜುನಾಥ<br>ರೇಷ್ಮೆ ಕೃಷಿ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ, ಮಾಗಂ., ಮೈಸೂರು. | 06–06–2017 |
| 3. | ಡಾ. ಮದಿಅಳಗನ್<br>ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗ,<br>ಮೈಸೂರು | 06–06–2017 |

| | |
|---|---|
| 2017/6.14 | ಶ್ರೀಮತಿ ಸಿ.ಆರ್. ಉಷಾ, ಲ್ಯಾಬ್ ಕಂ ಲೈಬ್ರರಿ ಅಸಿಸ್ಟೆಂಟ್, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರು ಅಮೇರಿಕಾ ದೇಶಕ್ಕೆ ತರಳಲು ಅನುಮತಿ ನೀಡುವ ಕುರಿತು – ಅನುಸಮರ್ಥನೆಗಾಗಿ. |
| ತೀರ್ಮಾನ | ಶ್ರೀಮತಿ ಸಿ.ಆರ್.ಉಷಾ, ಲ್ಯಾಬ್ ಕಂ ಅಸಿಸ್ಟೆಂಟ್, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರು ದಿನಾಂಕ 25-05-2017ರಿಂದ 24-10-2017 ರವರೆಗೆ ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು, ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ, ಅಮೇರಿಕಾ ದೇಶಕ್ಕೆ ವೈಯಕ್ತಿಕ ಭೇಟಿಯ ನಿಮಿತ್ತ ತೆರಳಲು ವಿಶ್ವವಿದ್ಯಾನಿಲಯವು ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2017/6.15 | ಮೈಸೂರು ವಿಶ್ವವಿದ್ಯಾನಿಲಯದ The University of Mysore (Creation of Posts of Professor for UG/PG College) Statutes 2013ರ ಅಧಿನಿಯಮವನ್ನು ಪ್ರಕಟಿಸಿರುವ ಕ್ರಮವನ್ನು – ಅನುಸಮರ್ಥನೆಗಾಗಿ |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ The University of Mysore (Creation of Posts of Professor for UG/PG College) Statutes 2013ರ ಅಧಿನಿಯಮಕ್ಕೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 200ರ ಪ್ರಕರಣ 40(6)ರ ಪ್ರಕಾರ ಘನತೆವೆತ್ತ ಕುಲಾಧಿಪತಿಯವರು ಅಂಕಿತ ನೀಡಿರುವ ಬಗ್ಗೆ ರಾಜ್ಯ ಸರ್ಕಾರದ ಕಾರ್ಯದರ್ಶಿಯವರು ತಿಳಿಸಿರುವ ಹಿನ್ನೆಲೆಯಲ್ಲಿ ದಿನಾಂಕ 08-06-2017 ರಂದು ಸದರಿ ಅಧಿನಿಯಮವನ್ನು ಪ್ರಕಟಿಸಲು ಕೈಗೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2017/6.16 | ಡಾ. ಆರ್.ಎಲ್. ಜಗದೀಶ್, ಪ್ರಾಧ್ಯಾಪಕರು, ಪಾಲಿಮರ್ ಸೈನ್ಸ್ ವಿಭಾಗ, ಸರ್.ಎಂ.ವಿ. ಸ್ನಾತಕೋತ್ತರ ಕೇಂದ್ರ, ಮಂಡ್ಯ ಇವರು ಶ್ರೀಲಂಕಾ ದೇಶಕ್ಕೆ ತೆರಳಲು ಅನುಮತಿ ನೀಡಿರುವ ಬಗ್ಗೆ – ಅನುಸಮರ್ಥನೆಗಾಗಿ |
| ತೀರ್ಮಾನ | ಡಾ. ಆರ್.ಎಲ್.ಜಗದೀಶ್, ಪ್ರಾಧ್ಯಾಪಕರು, ಪಾಲಿಮರ್ ಸೈನ್ಸ್ ವಿಭಾಗ, ಸರ್ ಎಂ.ವಿ. ಸ್ನಾತಕೋತ್ತರ ಕೇಂದ್ರ ಅವರು ದಿನಾಂಕ 20-02-2017 ರಿಂದ 25-02-2017ರವರೆಗೆ ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ, ಶ್ರೀಲಂಕಾಗೆ ವೈಯಕ್ತಿಕ ಭೇಟಿಯ ನಿಮಿತ್ತ ತೆರಳಲು ವಿಶ್ವವಿದ್ಯಾನಿಲಯವು ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2017/6.17 | 2016-17ನೇ ಸಾಲಿನ ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿಯ ಎರಡನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ. |
| ತೀರ್ಮಾನ | ದಿನಾಂಕ 24.03.2017 ರಂದು ನಡೆದ 2016-17ನೇ ಸಾಲಿನ ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿಯ ಎರಡನೇ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಅನುಮೋದಿಸಿತು ಮತ್ತು ದೈಹಿಕ ಶಿಕ್ಷಣ ವಿಭಾಗದಲ್ಲಿ ಸಿಸಿ ಕ್ಯಾಮರಾ ಮತ್ತು ಬಯೋಮೆಟ್ರಿಕ್ ಸಲಕರಣೆಗಳನ್ನು ಸಹ ಅಳವಡಿಸಲು ಸಭೆಯು ಸಮ್ಮತಿಸಿತು. |
| 2017/6.18 | ವಿದ್ಯಾರ್ಥಿಯು ಇತರೆ ವಿಷಯಗಳಲ್ಲಿ ಪಡೆದ ಸರಾಸರಿ ಅಂಕಗಳ ಆಧಾರದ ಮೇಲೆ ಅಂಕಗಳನ್ನು ನೀಡಿ ಫಲಿತಾಂಶ ಪ್ರಕಟಿಸುವ ಬಗ್ಗೆ. |
| ತೀರ್ಮಾನ | Sri Sandra Sebastian ಎಂಬ ವಿದ್ಯಾರ್ಥಿಯು M.Sc. Speech & Hearing ಕೋರ್ಸ್‌ಗೆ 2012ರಲ್ಲಿ ಪ್ರವೇಶ ಪಡೆದು, ಪದವಿ ವ್ಯಾಸಂಗ ಮುಗಿಸಿದ್ದು, ಪ್ರಥಮ |

| | |
|---|---|
| | ಚಾತುರ್ಮಾಸದ ವಿಷಯದ ಫಲಿತಾಂಶ ಪ್ರಕಟಗೊಂಡಿಲ್ಲದಿರುವುದಿಲ್ಲ ಎಂಬ ಅಂಶವನ್ನು ಗಮನಿಸಿದ ಸಿಂಡಿಕೇಟ್ ಇಂತಹ ಪ್ರಕರಣಗಳಲ್ಲಿ ವಿದ್ಯಾರ್ಥಿಗಳು ಪಡೆದ ಸರಾಸರಿ ಅಂಕಗಳನ್ನು ಪರಿಗಣಿಸಿ, ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಣೆಗೆ ಕ್ರಮವಹಿಸುವಂತೆ ಘನ ಸರ್ವೋಚ್ಚ ನ್ಯಾಯಾಲಯವು ತೀರ್ಪು ನೀಡಿರುವ ಹಿನ್ನೆಲೆಯಲ್ಲಿ ಹಾಗೂ ಸದರಿ ವಿದ್ಯಾರ್ಥಿಯು ಇತರೆ ವಿಷಯಗಳಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಸರಾಸರಿ ಅಂಕಗಳನ್ನು ನೀಡಿ ಫಲಿತಾಂಶ ಪ್ರಕಟಿಸುವಂತೆ ಸಿಂಡಿಕೇಟ್ ತೀರ್ಮಾನಿಸಿತು. |
| 2017/6.19 | ಪ್ರೊ. ಕೆ. ಎಂ. ಲೋಕನಾಥ ರೈ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ದಾನಿಗಳು ಕೋರಿರುವಂತೆ ದತ್ತಿಯ ನಿಬಂಧನೆಗಳನ್ವಯ M.Sc. Organic Chemistry ಸ್ನಾತಕೋತ್ತರ ಪದವಿಯಲ್ಲಿ ಅತ್ಯಂತ ಗರಿಷ್ಠ ಅಂಕ/ಉತ್ತಮ ಗ್ರೇಡ್ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡಲು **"ಪ್ರೊ ಕೆ.ಎಂ.ಲೋಕನಾಥ ರೈ"** ದತ್ತಿ ಸ್ಥಾಪನೆ ಮಾಡಲು ಸಿಂಡಿಕೇಟ್ ಅನುಮೋದಿಸಿತು. |
| 2017/6.20 | University of Mysore is ranked 9th in the Best University Survey 2017 conducted by The Week-Hansa Research, in All India Multi-Disciplinary State Universities and 15th among All India Multi-disciplinary Universities, respectively. |
| **DECISION** | The Syndicate has noted and appreciated the team worked behind in obtaining the 9th ranking position in the Best University Survey 2017 conducted by The Week-Hansa Research, in All India Multi-Disciplinary State Universities and 15th among All India Multi-disciplinary Universities, respectively. |
| 2017/6.21 | NIRF ಸಮೀಕ್ಷಾ ಕಾರ್ಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯ University Category ವರ್ಗದಲ್ಲಿ ದೇಶದಲ್ಲಿ 36ನೇ ಸ್ಥಾನವನ್ನು ಹಾಗೂ ಒಟ್ಟಾರೆ ಪ್ರವರ್ಗದಲ್ಲಿ (overall category) 57ನೇ ಸ್ಥಾನವನ್ನು ಪಡೆದು ಶ್ರೇಷ್ಠತೆಯನ್ನು ಮೆರೆದಿರುವ ಬಗ್ಗೆ. |
| ತೀರ್ಮಾನ | NIRF ಸರ್ವೆ ಕಾರ್ಯದಲ್ಲಿ ಪಿ.ಎಂ.ಇ.ಬಿ. ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಕಛೇರಿ ವೇಳೆಯನ್ನೂ ಮೀರಿ ಕೆಲಸ ಮಾಡಿರುವುದಕ್ಕೆ ಪ್ರೋತ್ಸಾಹ ಧನವಾಗಿ ರೂ.50,000/- ಗಳನ್ನು ನೀಡುವ ಬಗ್ಗೆ ಸಭೆಯು ಚರ್ಚಿಸಿ, ವಿಶ್ವವಿದ್ಯಾನಿಲಯದ ಕೆಲಸಕ್ಕಾಗಿ ಪ್ರತಿ ವಿಭಾಗದವರು ಪ್ರೋತ್ಸಾಹ ಧನದ ಬೇಡಿಕೆಯಿಡುವುದರಿಂದ ಪ್ರೋತ್ಸಾಹ ಧನವನ್ನು ನಿಯಮಾನುಸಾರ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಸಂಬಂಧ ಕೆಲಸ ನಿರ್ವಹಿಸಿದ ಉದ್ಯೋಗಿಗಳಿಗೆ ಪ್ರೋತ್ಸಾಹ ಧನ ನೀಡಲು ಕೋರಿರುವ ಪ್ರಸ್ತಾವನೆಯನ್ನು ಸಿಂಡಿಕೇಟ್ ತಿರಸ್ಕರಿಸಿತು. |
| 2017/6.22 | ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜು ಆವರಣದಲ್ಲಿರುವ ಎರಡು ಟೆನ್ನಿಸ್ ಕೋರ್ಟ್‌ಗಳನ್ನು ಬಾಡಿಗೆ ಆಧಾರದ ಮೇಲೆ ಟೆನ್ನಿಸ್ ತರಬೇತಿ ಶಿಬಿರ ನಡೆಸಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜು ಆವರಣದಲ್ಲಿರುವ ಎರಡು ಟೆನ್ನಿಸ್ ಕೋರ್ಟ್‌ಗಳನ್ನು ಬಾಡಿಗೆಗೆ ನೀಡದಿರಲು ಬದಲಿಗೆ ಸದರಿ ಕೋರ್ಟ್‌ಗಳನ್ನು ವಿಶ್ವವಿದ್ಯಾನಿಲಯವು ಸೂಕ್ತ ರೀತಿಯಲ್ಲಿ ವಿದ್ಯಾರ್ಥಿಗಳ ಕ್ರೀಡಾಚಟುವಟಿಕೆಗಳಿಗೆ ಉಪಯುಕ್ತ ರೀತಿಯಲ್ಲಿ ಸದ್ಬಳಕೆ ಮಾಡಿಕೊಳ್ಳುವಂತೆ ಸಿಂಡಿಕೇಟ್ ತೀರ್ಮಾನಿಸಿತು. |
| 2017/6.23 | ಡಾ. ಟಿ.ವಿ. ಸತ್ಯನಾರಾಯಣ, ನಿವೃತ್ತ ಸಂಶೋಧನಾ ಸಹಾಯಕರು ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು, ಇವರನ್ನು ಒಂದು ವರ್ಷದ ಅವಧಿಗೆ ಗೌರವ ಸಲಹೆಗಾರರಾಗಿ ಮರು ನೇಮಕ ಮಾಡಲು ಕುರಿತು. |
| ತೀರ್ಮಾನ | ಡಾ. ಟಿ.ವಿ.ಸತ್ಯನಾರಾಯಣ, ನಿವೃತ್ತ ಸಂಶೋಧನಾ ಸಹಾಕರು, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು ಇವರು ವಿಭಾಗದಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ |

| | |
|---|---|
| | ಶ್ರೀಯುತರನ್ನು ಮತ್ತೊಂದು ಒಂದು ವರ್ಷದ ಅವಧಿಗೆ ಈ ಹಿಂದೆ ಪಡೆಯುತ್ತಿದ್ದ ಗೌರವಧನದೊಂದಿಗೆ ಗೌರವ ಸಲಹೆಗಾರರಾಗಿ ನೇಮಕ ಮಾಡಲು ಸಿಂಡಿಕೇಟ್ ಅನುಮೋದಿಸಿತು. |
| 2017/6.24 | ಮೈಸೂರು ವಿಶ್ವವಿದ್ಯಾನಿಲಯದ ಔಟ್‌ರೀಚ್, ಸ್ಪೆಷಲೈಜ್ಡ್ ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಪರೀಕ್ಷಾ ಕಾರ್ಯಗಳ ಸಂಬಂಧ Integrated Software Solution ಅಳವಡಿಸಲಾಗಿದ್ದು, ಈ ಸಂಬಂಧದ ಬಾಬ್ತಿನ ಹುಂಡಿಯನ್ನು ಪಾವತಿಸುವ ಸಲುವಾಗಿ 2017–18ನೇ ಸಾಲಿನ ಆಯವ್ಯಯದಲ್ಲಿ ವಾರ್ಷಿಕ ವೆಚ್ಚ ಅಂದಾಜು ರೂ. 5.00 ಕೋಟಿಗಳನ್ನು ನಿಗಧಿಪಡಿಸುವ ಬಗ್ಗೆ. |
| ತೀರ್ಮಾನ | KTPP Act and Rules 1999 and 2000 ನಿಯಮನುಸಾರ Integrated Software Solution ಅಳವಡಿಸಲಾಗಿದ್ದು ಈ ಸಂಬಂಧ M/s MSL Learning Systems Pvt. Ltd., ಅವರು ಕಾಲಕಾಲಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಔಟ್‌ರೀಚ್, ಸ್ಪೆಷಲೈಜ್ಡ್ ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಲಿದ್ದು ಆ ಕಾರ್ಯಗಳಿಗುಣವಾಗಿ ಸ್ವೀಕರಿಸುವ ಹುಂಡಿಗಳ ಪಾವತಿಗೆ ಅನುಕೂಲವಾಗುವಂತೆ ವಾರ್ಷಿಕವಾಗಿ 2017–18ನೇ ಸಾಲಿನ ವಾರ್ಷಿಕ ಆಯವ್ಯಯದ ಅಂದಾಜಿನಲ್ಲಿ ರೂ. 5.00 ಕೋಟಿಗಳನ್ನು ನಿಗದಿಪಡಿಸಲು ಹಣಕಾಸು ಸಮಿತಿ ಈಗಾಗಲೇ ಒಪ್ಪಿಗೆ ನೀಡಿರುವುದನ್ನು ಸಿಂಡಿಕೇಟ್ ಸಹ ಅನುಮೋದಿಸಿತು. |
| 2017/6.25 | ಡಾ. ಮಹದೇವಯ್ಯ, ಮಾರ್ಗದರ್ಶಕರು, ಇವರು ಸಲ್ಲಿಸಿರುವ ಮಾನ್ಯ ಉಚ್ಚನ್ಯಾಯಾಲಯದ ತೀರ್ಮಾನದ ಕುರಿತು. |
| ತೀರ್ಮಾನ | ಡಾ.ಮಹದೇವಯ್ಯರವರು ಸಂಶೋಧನಾ ವಿದ್ಯಾರ್ಥಿಗಳಿಗೆ 5 ವರ್ಷಗಳ ಕಾಲ ಮಾರ್ಗದರ್ಶನ ಮಾಡದಂತೆ ತಡೆಹಿಡಿಯುವುದು ಹಾಗೂ ಇವರ ಆರೋಪಕ್ಕೆ ಒಳಪಟ್ಟಂತಹ ಅಭ್ಯರ್ಥಿಯ ಪಿ.ಹೆಚ್‌ಡಿ ನೋಂದಣಿಯನ್ನು ರದ್ದುಪಡಿಸುವ ಕುರಿತು ಈಗಾಗಲೇ ಹಿಂದಿನ ಸಿಂಡಿಕೇಟ್ ಸಭೆಗಳಲ್ಲಿ ತೆಗೆದುಕೊಳ್ಳಲಾಗಿರುವುದನ್ನು ಗಮನಿಸಿದ ಸಿಂಡಿಕೇಟ್, ಡಾ. ಮಹದೇವಯ್ಯರವರ ವಿರುದ್ಧ ನೀಡಿರುವ ಸಿಂಡಿಕೇಟ್ ನಿರ್ಣಯಗಳನ್ನು ರದ್ದುಗೊಳಿಸಿ ಈ ವಿಷಯವನ್ನು ವಿಶ್ವವಿದ್ಯಾನಿಲಯದ ಪಿಎಚ್.ಡಿ. ನಿಯಮಾವಳಿಯ ಪ್ರಕಾರ ಮರು ಪರಿಗಣಿಸಿ ಕಾನೂನುಬದ್ಧವಾಗಿ ಸೂಕ್ತ ಆದೇಶಗಳನ್ನು ನೀಡುವ ಸಲುವಾಗಿ Writ Petition No.22805/2016(EDN-RES), dated 02-03-2017ರಲ್ಲಿ ಉಚ್ಚನ್ಯಾಯಾಲಯವು ಆದೇಶಿಸಿರುವಂತೆ ಕ್ರಮಕೈಗೊಳ್ಳಲು ಸಿಂಡಿಕೇಟ್ ಅನುಮೋದಿಸಿತು. |
| 2017/6.26 | Statute for the creation of post of the life-long distinguished Professor in the University of Mysore ಪರಿನಿಯಮಾವಳಿಯನ್ನು ಸರ್ಕಾರವು ತಿರಸ್ಕರಿಸುವ ವಿಷಯದ ಬಗ್ಗೆ (ಸಿಂಡಿಕೇಟ್ ಸದಸ್ಯರ ಪ್ರಸ್ತಾವನೆ). |
| ತೀರ್ಮಾನ | Statute for the creation of post of the life-long distinguished Professor in the University of Mysore ಪರಿನಿಯಮಾವಳಿಯನ್ನು ಸರ್ಕಾರವು ತಿರಸ್ಕರಿಸಿರುವುದನ್ನು ಗಮನಿಸಿದ ಸಿಂಡಿಕೇಟ್ ಈ ಪ್ರಕಾರ Life-long distinguished Professor ಹುದ್ದೆಗಳಲ್ಲಿ ನೇಮಕಗೊಂಡ ಪ್ರಾಧ್ಯಾಪಕರುಗಳನ್ನು ತಕ್ಷಣವೇ ಹುದ್ದೆಯಿಂದ ಬಿಡುಗಡೆಗೊಳಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| 2017/6.27 | ಡಾ. ಬಿ. ಶಂಕರ್, ಸಹ ಪ್ರಾಧ್ಯಾಪಕರು, ಯೂನಿವರ್ಸಿಟಿ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚ್, ಮಾನಸಗಂಗೋತ್ರಿ, ಮೈಸೂರು ಇವರಿಗೆ ಅಮೇರಿಕಾ ದೇಶಕ್ಕೆ ತೆರಳಲು ಅನುಮತಿ ನೀಡಿರುವ ಸಂಬಂಧ ಅನುಸಮರ್ಥನೆ ಬಗ್ಗೆ. |
| ತೀರ್ಮಾನ | ಡಾ. ಬಿ. ಶಂಕರ್, ಸಹ ಪ್ರಾಧ್ಯಾಪಕರು, ಯೂನಿವರ್ಸಿಟಿ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚ್, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ 27–06–2017ರಿಂದ 30–07–2017ರವರೆಗೆ ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು |

| | |
|---|---|
| | ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ವೈಯಕ್ತಿಕ ಕಾರ್ಯ ನಿಮಿತ್ತ ಅಮೇರಿಕಾ ದೇಶಕ್ಕೆ ಭೇಟಿ ನೀಡಲು ವಿಶ್ವವಿದ್ಯಾನಿಲಯವು ದಿನಾಂಕ 13-06-2017ರ ಆದೇಶದಲ್ಲಿ ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2017/6.28 | ಶ್ರೀಮತಿ ಮಧುರ, ಎ.ಎಸ್. ಸಂಶೋಧನಾ ಅಭ್ಯರ್ಥಿ, ಇವರು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
| ತೀರ್ಮಾನ | ಶ್ರೀಮತಿ ಮಧುರ ಎ.ಎಸ್, ಸಂಶೋಧನಾ ಅಭ್ಯರ್ಥಿ ಇವರ ಸಂಶೋಧನಾ ಅವಧಿಯು ದಿನಾಂಕ 25.05.2017ಕ್ಕೆ 07 ವರ್ಷಗಳು ಪೂರ್ಣಗೊಂಡಿದ್ದುದಲ್ಲದೆ, ಇವರ ಖಾಯಂ ನೋಂದಣಿಯು ಪಿ.ಹೆಚ್.ಡಿ. ನಿಯಮಾವಳಿಯ ಪ್ರಕಾರ ರದ್ದಾಗಿರುವುದರಿಂದ, ಸದರಿರವರು Maternity Grounds ಆಧಾರದ ಮೇಲೆ ವೈದ್ಯಕೀಯ ಪ್ರಮಾಣ ಪತ್ರದ ಜೊತೆಗೆ 06 ತಿಂಗಳ ಹೆಚ್ಚುವರಿ ಕಾಲಾವಧಿಯನ್ನು ಕೋರಿ ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ ವಿಶೇಷ ದಂಡ ಶುಲ್ಕದೊಡನೆ ಅನುಮತಿ ನೀಡಲು ಸಿಂಡಿಕೇಟ್ ಅನುಮೋದಿಸಿತು. |
| 2017/6.29 | ಶ್ರೀಮತಿ ಶಶಿಕಲಾ, ಹೆಚ್.ಆರ್. ಸಂಶೋಧನಾ ಅಭ್ಯರ್ಥಿ, ಇವರು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
| ತೀರ್ಮಾನ | ಶ್ರೀಮತಿ ಶಶಿಕಲಾ, ಹೆಚ್.ಆರ್. ಸಂಶೋಧನಾ ಅಭ್ಯರ್ಥಿ, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಇವರ ಸಂಶೋಧನಾ ಅವಧಿಯು ದಿನಾಂಕ 3-04-2017ಕ್ಕೆ 07 ವರ್ಷಗಳು ಪೂರ್ಣಗೊಂಡಿದ್ದುದರಿಂದ, ಸದರಿರವರು Maternity Grounds ಆಧಾರದ ಮೇಲೆ ವೈದ್ಯಕೀಯ ಪ್ರಮಾಣ ಪತ್ರದ ಜೊತೆಗೆ 06 ತಿಂಗಳ ಹೆಚ್ಚುವರಿ ಕಾಲಾವಧಿಯನ್ನು ಕೋರಿ ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ ವಿಶೇಷ ದಂಡ ಶುಲ್ಕದೊಡನೆ ಅನುಮತಿ ನೀಡಲು ಸಿಂಡಿಕೇಟ್ ಅನುಮೋದಿಸಿತು. |
| 2017/6.30 | ಶ್ರೀ ಎಂ.ಕೆ. ಅನಿಲ್ ಕುಮಾರ್, ಸಂಶೋಧನಾ ವಿದ್ಯಾರ್ಥಿ, ಸಮಾಜಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ರದ್ದುಪಡಿಸಿರುವ ಪಿಹೆಚ್.ಡಿ. ನೊಂದಣಿಯನ್ನು ಹಿಂಪಡೆದು ಮಹಾಪ್ರಬಂಧವನ್ನು ಸಲ್ಲಿಸಲು ಅನುಮತಿ ಕೋರಿರುವ ಬಗ್ಗೆ. |
| ತೀರ್ಮಾನ | ಶ್ರೀ ಎಂ.ಕೆ.ಅನಿಲ್ ಕುಮಾರ್, ಸಂಶೋಧನಾ ವಿದ್ಯಾರ್ಥಿ, ಸಮಾಜಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಸಲ್ಲಿಸಿರುವ ಮನವಿಯನ್ನು ಪರಿಗಣಿಸಿದ ಸಿಂಡಿಕೇಟ್ ಅವರ ಭವಿಷ್ಯದ ಹಿತದೃಷ್ಟಿಯಿಂದ ಸದರಿ ವಿದ್ಯಾರ್ಥಿಯು ಇನ್ನೂ ಮುಂದೆ ದುರ್ನಡತೆಯಿಂದ ವರ್ತಿಸದಂತೆ ತಿಳುವಳಿಕೆ ನೀಡಿ ತಮ್ಮ ಸಂಶೋಧನಾ ಕಾರ್ಯವನ್ನು ಮುಗಿಸುವ ಸಲುವಾಗಿ ಷರತ್ತುಬದ್ಧ ಮುಚ್ಚಳಿಕೆಯನ್ನು ಬರೆಸಿಕೊಂಡು ಸದರಿರವರಿಗೆ ಪಿ.ಹೆಚ್.ಡಿ. ನೋಂದಣಿಯನ್ನು ರದ್ದುಪಡಿಸಿರುವ ಆದೇಶವನ್ನು ಹಿಂಪಡೆದು ಮಹಾಪ್ರಬಂಧವನ್ನು ಸಲ್ಲಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| 2017/6.31 | ದಿನಾಂಕ 29-09-2016ರಂದು ಜರುಗಿದ ಸಿಂಡಿಕೇಟ್ ನಿರ್ಣಯವನ್ನು ಹಿಂಪಡೆದು, ನಿಯೋಜನೆ ಎಂದು ಪರಿಗಣಿಸಿ ಕಾರ್ಯನಿರ್ವಹಿಸುವ ಬಗ್ಗೆ. |
| ತೀರ್ಮಾನ | ದಿನಾಂಕ 29-09-2016ರಂದು ಜರುಗಿದ ಸಿಂಡಿಕೇಟ್ ನಿರ್ಣಯದ ಪ್ರಕಾರ ಡಾ. ಮೀನಾಕುಮಾರಿ, ಅತಿಥಿ ಉಪನ್ಯಾಸಕರು ಇವರಿಗೆ ವೇತನ ನೀಡಲು ತಾಂತ್ರಿಕ ತೊಂದರೆಯಿದೆ ಎಂದು ಹಣಕಾಸು ಅಧಿಕಾರಿಯವರು ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಈಗಾಗಲೇ ವಿಶ್ವವಿದ್ಯಾನಿಲಯದ ವತಿಯಿಂದ ಹೊರಡಿಸಲಾಗಿರುವ ಆದೇಶದಲ್ಲಿ ವರ್ಗಾವಣೆ ಎಂಬುದರ ಬದಲು ನಿಯೋಜನೆ ಮೇರೆಗೆ ಎಂದು ವಿಶ್ವವಿದ್ಯಾನಿಲಯವು ಆದೇಶ ಹೊರಡಿಸಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |

| | |
|---|---|
| 2017/6.32 | ಪ್ರೊ. ಬಿ. ಶಿವರಾಜ್, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ಅಧ್ಯಯನ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರ ಕಡ್ಡಾಯ ನಿವೃತ್ತಿಯನ್ನು ರದ್ದುಗೊಳಿಸಿ ಕರ್ತವ್ಯಕ್ಕೆ ಪುನರ್‌ನೇಮಕಗೊಳಿಸಿರುವ ಬಗ್ಗೆ. |
| ತೀರ್ಮಾನ | ಸರ್ಕಾರಿ ಆದೇಶ ಸಂಖ್ಯೆ: ಇಡಿ 102 ಯುಎಂಎ 2016, ಬೆಂಗಳೂರು ದಿನಾಂಕ 12.06.2017ರಲ್ಲಿ ದಿನಾಂಕ 21-11-2016ರಂದು ನಡೆದ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ 2016/11.9ರಂತೆ ತೆಗೆದುಕೊಂಡಿರುವ ತೀರ್ಮಾನ ಹಾಗೂ ತತ್ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದ ಆದೇಶಗಳನ್ನು ಸರ್ಕಾರವು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 10(1)ರ ಅನ್ವಯ ರದ್ದುಗೊಳಿಸಿ ಪ್ರೊ. ಬಿ. ಶಿವರಾಜ್, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ಅಧ್ಯಯನ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರನ್ನು ಕರ್ತವ್ಯಕ್ಕೆ ಪನರ್ ನೇಮಕಗೊಳಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಅನುಮೋದಿಸಿತು. |
| 2017/6.33 | ಶ್ರೀಮತಿ ಸಿಂಧು ಸಿ.ಆರ್, ಸಂಶೋಧನಾ ಅಭ್ಯರ್ಥಿ, ಇವರಿಗೆ ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
| ತೀರ್ಮಾನ | ಶ್ರೀಮತಿ ಸಿಂಧು ಸಿ.ಆರ್, ಸಂಶೋಧನಾ ಅಭ್ಯರ್ಥಿ, ಆಂಗ್ಲ ವಿಭಾಗ, ಸ್ನಾತಕೋತ್ತರ ಕೇಂದ್ರ, ಮಂಡ್ಯ ಇವರ ಸಂಶೋಧನಾ ಅವಧಿಯು ದಿನಾಂಕ 27-05-2017 ರಂದು ಪೂರ್ಣಗೊಂಡಿರುವುದರಿಂದ, ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇಲೆ ಎರಡು ತಿಂಗಳು ಹೆಚ್ಚುವರಿ ಕಾಲಾವಕಾಶ ನೀಡಬೇಕೆಂದು ಕೋರಿರುವ ಮನವಿಯನ್ನು ಪರಿಗಣಿಸಿ ವಿಶೇಷ ದಂಡ ಶುಲ್ಕದೊಡನೆ ಅನುಮತಿ ನೀಡಲು ಸಿಂಡಿಕೇಟ್ ಅನುಮೋದಿಸಿತು. |
| 2017/6.34 | ಡಾ.ಕೆ.ಜಿ.ಆಶಾಮಂಜರಿ, ಪ್ರಾಧ್ಯಾಪಕರು, ಭೂವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ ಮೈಸೂರು ಇವರು ತಮ್ಮನ್ನು ಅಧ್ಯಕ್ಷರನ್ನಾಗಿ ಮುಂದುವರೆಸಬೇಕೆಂದು ಮನವಿ ಸಲ್ಲಿಸಿರುವ ಬಗ್ಗೆ. |
| | ನಿವೃತ್ತಿಗೊಂಡ ಕೆಲವು ವಿಭಾಗಗಳ ಅಧ್ಯಕ್ಷರು/ಪ್ರಾಧ್ಯಾಪಕರು ತಮ್ಮ ಕೊಠಡಿಯನ್ನು ತೆರವುಗೊಳಿಸದಿರುವುದು ವಿಶ್ವವಿದ್ಯಾನಿಲಯದ ಗಮನಕ್ಕೆ ಬಂದಿದ್ದು, ತಕ್ಷಣವೇ ಅಂತಹವರು ಕೊಠಡಿಯನ್ನು ತೆರವುಗೊಳಿಸುವುದು, ಖಾಲಿ ಮಾಡದಿದ್ದ ಪಕ್ಷದಲ್ಲಿ ಎನ್.ಓ.ಸಿ. ನೀಡಿದ ಅಧಿಕಾರಿಗಳ ಮೇಲೆ ಕ್ರಮವನ್ನು ಕೈಗೊಳ್ಳಲಾಗುವುದೆಂದು ಮಾನ್ಯ ಕುಲಸಚಿವರು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | ಭೂ ವಿಜ್ಞಾನ ಅಧ್ಯಯನ ವಿಭಾಗದಲ್ಲಿನ ಈ ಹಿಂದೆ ನಡೆದ ಅಹಿತಕರ ಘಟನೆಗಳಿಗೆ ಸಂಬಂಧಪಟ್ಟಂತೆ ದಿನಾಂಕ 29.09.2016ರ ಸಿಂಡಿಕೇಟ್ ನಿರ್ಣಯದಂತೆ ಡಾ. ಕೆ.ಜಿ.ಆಶಾಮಂಜರಿ, ಪ್ರಾಧ್ಯಾಪಕರು, ಇವರನ್ನು ವಿಭಾಗದ ಅಧ್ಯಕ್ಷ ಸ್ಥಾನದಿಂದ ಬಿಡುಗಡೆಗೊಳಿಸಲಾಗಿತ್ತು. ಸದರಿರವರು ಪ್ರಸ್ತುತವಾಗಿ ಸಲ್ಲಿಸಿರುವ ಮನವಿಯಲ್ಲಿ ಕೆಲವೊಂದು ಅಂಶಗಳನ್ನು ಪರಿಶೀಲಿಸಿ, ಅವುಗಳ ಆಧಾರದ ಮೇಲೆ, ಸದರಿರವರನ್ನು ಸಂಬಂಧಪಟ್ಟ ವಿಭಾಗದ ಅಧ್ಯಕ್ಷರಾಗಿ ಮುಂದುವರೆಸುವಂತೆ ಸಿಂಡಿಕೇಟ್ ನಿರ್ಣಯಿಸಿತು. |
| 2017/6.35 | ಜೈವಿಕ ತಂತ್ರಜ್ಞಾನ, ಜೆನೆಟಿಕ್ಸ್ & ಜೀನೋಮಿಕ್ಸ್, ಆರ್ಗ್ಯಾನಿಕ್ ಕೆಮಿಸ್ಟ್ರಿ ಮತ್ತು ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳನ್ನು ನೇಮಿಸುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಅಧ್ಯಯನ ವಿಭಾಗಗಳಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯು ಅಂತ್ಯಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಜೇಷ್ಠತಾಪಟ್ಟಿಯಲ್ಲಿ ಹಿರಿಯರಾಗಿರುವವರನ್ನು ನೇಮಿಸುವ ಸಂಬಂಧ ವಿಶ್ವವಿದ್ಯಾನಿಲಯವು ಈ ಕೆಳಕಂಡಂತೆ ವಿಭಾಗಾಧ್ಯಕ್ಷರನ್ನಾಗಿ ನೇಮಿಸಲು/ಮರುನೇಮಿಸಲು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| ತೀರ್ಮಾನ | <table><tr><th>ಕ್ರಮ ಸಂಖ್ಯೆ</th><th>ನೇಮಕಗೊಂಡ ವಿಭಾಗದ ಅಧ್ಯಕ್ಷರು</th><th>ಜಾರಿಗೆ ಬರುವ ದಿನಾಂಕ (ಎರಡು ವರ್ಷಗಳ ಅವಧಿ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ)</th></tr><tr><td>1.</td><td>ಪ್ರೊ. ಭಾರತಿ ಪಿ.ಸಾಲಿಮಠ್ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ, ಮಾಗಂ., ಮೈಸೂರು</td><td>05–07–2017</td></tr><tr><td>2.</td><td>ಪ್ರೊ. ಭಾಗ್ಯ.ಎಂ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ ಮಾಗಂ., ಮೈಸೂರು.</td><td>08–07–2017</td></tr><tr><td>3.</td><td>ಪ್ರೊ. ವೈ.ಬಿ.ಬಸವರಾಜು ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾಗಂ., ಮೈಸೂರು.</td><td>08–07–2017</td></tr><tr><td>4.</td><td>ಪ್ರೊ. ದಯಾನಂದ ಮಾನೆ ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ, ಮಾಗಂ., ಮೈಸೂರು</td><td>08–07–2017ರಿಂದ ಎರಡು ವರ್ಷಗಳ ಅವಧಿ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಮರುನೇಮಕ ಮಾಡಲಾಗಿದೆ.</td></tr></table> |
| **2017/6.36** | ಮೈಸೂರು ವಿಶ್ವವಿದ್ಯಾನಿಲಯದ ವಕೀಲರುಗಳ ಪಟ್ಟಿಯಲ್ಲಿ ಹೆಸರನ್ನು ಸೇರ್ಪಡಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ವಕೀಲರುಗಳ ಪಟ್ಟಿಯಲ್ಲಿ ಶ್ರೀ.ಪಿ.ಕರುಣಾಕರ್, ವಕೀಲರು, ಬೆಂಗಳೂರು ಹಾಗೂ ಶ್ರೀ ಚೌಧ್ರಿ ಶಂಕರ್ ಎಂ.ಎಸ್., ಮೈಸೂರು ಇವರ ಹೆಸರನ್ನು ಸೇರ್ಪಡಿಸಲು ಸಿಂಡಿಕೇಟ್ ಅನುಮತಿಸಿತು. |
| **2017/6.37** | ಶ್ರೀ ಎನ್.ಆರ್. ಶ್ರೇಯಸ್, ಸಹಾಯಕ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಇವರನ್ನು ಮೈಸೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ವಾಣಿಜ್ಯ ವಿಭಾಗಕ್ಕೆ ಹುದ್ದೆ ರಹಿತವಾಗಿ ವರ್ಗಾವಣೆ ಮಾಡುವ ಸಂಬಂಧ ಅಭಿಪ್ರಾಯವನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಬಂದಿರುವ ಪ್ರಸ್ತಾವನೆಯ ಬಗ್ಗೆ. |
| ತೀರ್ಮಾನ | ಶ್ರೀ ಎನ್.ಆರ್.ಶ್ರೇಯಸ್, ಸಹಾಯಕ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಇವರನ್ನು ಮೈಸೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ವಾಣಿಜ್ಯ ವಿಭಾಗಕ್ಕೆ ಹುದ್ದೆ ಸಮೇತ ವರ್ಗಾವಣೆ ಮಾಡುವ ಅಭಿಪ್ರಾಯವನ್ನು ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2017/6.38** | ಡಾ. ಪಿ. ನಾಗಭೂಷಣ್, ಪ್ರಾಧ್ಯಾಪಕರು, ಗಣಕವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರು ಐಐಐಟಿ–ಅಲಹಾಬಾದ್‌ನ ನಿರ್ದೇಶಕರಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ ಇವರನ್ನು ಮೈ.ವಿ.ವಿಯ ಪ್ರಾಧ್ಯಾಪಕರ ಹುದ್ದೆಯಿಂದ ಬಿಡುಗಡೆ ಮಾಡಿರುವ ಕ್ರಮವನ್ನು ಅನುಸಮರ್ಥನೆಗಾಗಿ ಹಾಗೂ ವಿಭಾಗದಲ್ಲಿನ ಅವರ ಪ್ರಾಧ್ಯಾಪಕರ ಹುದ್ದೆಯ ಮೇಲಿನ ಹಕ್ಕನ್ನು ಕಾಯ್ದಿರಿಸಲು ಅನುಮತಿಯನ್ನು ನೀಡುವಂತೆ ಕೋರಿರುವ ಬಗ್ಗೆ. |
| ತೀರ್ಮಾನ | ಡಾ. ಪಿ. ನಾಗಭೂಷಣ್, ಪ್ರಾಧ್ಯಾಪಕರು, ಗಣಕವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರು ಐಐಐಟಿ–ಅಲಹಾಬಾದ್‌ನ ನಿರ್ದೇಶಕರಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ ಅವರನ್ನು ಮೈಸೂರು ವಿಶ್ವವಿದ್ಯಾನಿಲಯ ಪ್ರಾಧ್ಯಾಪಕರ ಹುದ್ದೆಯಿಂದ ಬಿಡುಗಡೆ ಮಾಡಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸ್ಥಿರೀಕರಿಸಿತು ಹಾಗೂ ವಿಭಾಗದಲ್ಲಿನ ಅವರ ಪ್ರಾಧ್ಯಾಪಕರ ಹುದ್ದೆಯ ಮೇಲಿನ ಹಕ್ಕನ್ನು ಕಾಯ್ದಿರಿಸಲು ಅನುಮೋದಿಸಿತು. |

| | |
|---|---|
| **2017/6.39** | 2017–18ನೇ ಶೈಕ್ಷಣಿಕ ಸಾಲಿನಿಂದ ಡಾ. ಬಿ.ಆರ್. ಅಂಬೇಡ್ಕರ್, ಸ್ನಾತಕೋತ್ತರ ಕೇಂದ್ರ ಚಾಮರಾಜನಗರ, ಇಲ್ಲಿ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ. |
| ತೀರ್ಮಾನ | ಡಾ. ಬಿ.ಆರ್.ಅಂಬೇಡ್ಕರ್, ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಕೇಂದ್ರದಲ್ಲಿ ಹೊಸದಾಗಿ ಎಂ.ಎಸ್ಸಿ. ರಸಾಯನಶಾಸ್ತ್ರ ಮತ್ತು ಭೌತಶಾಸ್ತ್ರ ಎರಡು ಹೊಸ ಕೋರ್ಸುಗಳನ್ನು ಪ್ರಾರಂಭಿಸಲು ಮೂಲಭೂತ ಸೌಕರ್ಯಗಳ ಕೊರತೆಯಿರುವುದರಿಂದ ಈ ಶೈಕ್ಷಣಿಕ ಸಾಲಿನಲ್ಲಿ ಅವಶ್ಯವಿರುವ ಎಲ್ಲಾ ಸೌಕರ್ಯಗಳನ್ನು ಪೂರೈಸಲು ಕ್ರಮಕೈಗೊಂಡು ನಿಯಮಾನುಸಾರ ಎಲ್ಲಾ ಪ್ರಕ್ರಿಯೆಗಳೊಡನೆ ಸದರಿ ಕೋರ್ಸುಗಳನ್ನು ಈ ವರ್ಷದಿಂದ ಪ್ರಾರಂಭಿಸುವ ಬದಲು 2018–19ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಸಿಂಡಿಕೇಟ್ ನಿರ್ಣಯಿಸಿತು. |
| **2017/6.40** | ಅಧ್ಯಯನ ಮಂಡಳಿಗಳನ್ನು (BOS) ರಚಿಸಿರುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದೊಂದಿಗೆ Specialized ಕೋರ್ಸುಗಳನ್ನು ನಡೆಸಲು ಒಡಂಬಡಿಕೆ ಮಾಡಿಕೊಂಡಿರುವ ಈ ಕೆಳಕಂಡ ಸಂಸ್ಥೆಗಳಿಗೆ ಆದೇಶ ನೀಡಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸ್ಥಿರೀಕರಿಸಿತು. |

| ಕ್ರಮ ಸಂಖ್ಯೆ | ಸಂಸ್ಥೆಯ ಹೆಸರು | ಸಂಸ್ಥೆಯವರು ನಡೆಸುವ Specialized ಕೋರ್ಸುಗಳು |
|---|---|---|
| 1. | Asian Institute of Gaming and Animation, Bangalore. | (1) Four Years BFA in Digital Art & Animation |
| 2. | Ipixio Education Trust, Bangalore | (1) Three years Bachelor of Science in Fashion and Apparel Design (B.FAD)<br>(2) Three years Bachelor of Science in Interior & Lifespace Design (B.ILD) ಎಂಬ ಎರಡು Specialized ಕೋರ್ಸುಗಳು. |
| 3. | Golden Valley Global Institute, ಕೋಲಾರ | (1) Two year MBA in Tourism and Hospitality Management (2) Two year MBA in Luxury Management (3) Two year MBA in Sport Management (4) Three year BBA in Tourism and Hospitality Management (5) Four year Bachelor of Design (B. Des) with Specialization in Product Design (6) Four year Bachelor of Design (B. Des) with Specialization in Transportation Design (7) Four year Bachelor of Design (B. Des) with Specialization in Interaction Design (8) Four year Bachelor of Design (B. Des) with Specialization in Retail & Packaging(9) Five year Integrated Master in Digital Leadership with specialization in Marketing ಎಂಬ ಒಂಭತ್ತು Specialized ಕೋರ್ಸುಗಳು. |
| 4. | DMSS Institute of Professional Studies, ಮೈಸೂರು. | (1) Three years Bachelor of Professional Studies (BPS).<br>(2) Four years Bachelor of Applied Arts (Hons). (3) Bachelor in Temple Administration ಎಂಬ ಮೂರು Specialized ಕೋರ್ಸುಗಳು. |
| 5. | Mysore Central Academy of Arts & Multimedia, ಮೈಸೂರು. | (1) PG Diploma in Wellness Science. |

**2017/6.41** ಮಾನಸಗಂಗೋತ್ರಿ ಒಳಾಂಗಣ ಕ್ರೀಡಾಂಗಣಕ್ಕೆ ಪ್ರವೇಶ ಶುಲ್ಕವನ್ನು ನಿಗಧಿಪಡಿಸುವ ಬಗ್ಗೆ.

**ತೀರ್ಮಾನ** ಮಾನಸಗಂಗೋತ್ರಿ ಆವರಣದಲ್ಲಿ ಹೊಸದಾಗಿ ನಿರ್ಮಾಣವಾಗಿರುವ ಒಳಾಂಗಣ ಕ್ರೀಡಾಂಗಣಕ್ಕೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಾರ್ವಜನಿಕರುಗಳಿಗೆ ಪ್ರವೇಶ ಶುಲ್ಕವನ್ನು ಈ ಕೆಳಕಂಡಂತೆ ನಿಗಧಿಪಡಿಸಲು ಸಿಂಡಿಕೇಟ್ ತೀರ್ಮಾನಿಸಿತು.

| ಇತರೆ ಸಂಸ್ಥೆಗಳಿಗೆ (ದಿನ ಒಂದಕ್ಕೆ) | ಸರ್ಕಾರಿ ಸಂಸ್ಥೆಗಳಿಗೆ (ದಿನ ಒಂದಕ್ಕೆ) | ಬ್ಯಾಡ್‌ಮಿಂಟನ್ ಸಂಸ್ಥೆಗಳಿಗೆ (ದಿನ ಒಂದಕ್ಕೆ) | ಸ್ನಾತಕೋತ್ತರ ವಿವಿಧ ವಿಭಾಗಗಳ ವಿದ್ಯಾರ್ಥಿಗಳಿಗೆ (ಒಂದು ತಿಂಗಳಿಗೆ) | ವಿ.ವಿ.ನಿಲಯದ ಉದ್ಯೋಗಿಗಳಿಗೆ ಮತ್ತು ಅವರ ಕುಟುಂಬಕ್ಕೆ (ಒಂದು ತಿಂಗಳಿಗೆ) | ಸಾರ್ವಜನಿಕರಿಗೆ (ಒಂದು ತಿಂಗಳಿಗೆ) |
|---|---|---|---|---|---|
| ರೂ. | ರೂ. | ರೂ. | ರೂ. | ರೂ. | ರೂ. |
| 10,000 | 5,000 | 8,000 | 300 | 500 | 1,000 |

**2017/6.42** 97ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರದಾನ ಮಾಡಲಾಗಿದ್ದ SKYWAY INTERNATION TRAVELS ಚಿನ್ನದ ಪದಕವನ್ನು ಹಿಂಪಡೆಯುವ ಬಗ್ಗೆ.

**ತೀರ್ಮಾನ** ಕುಲಸಚಿವ (ಪರೀಕ್ಷಾಂಗ) ವಿಭಾಗದಲ್ಲಿನ ಗ್ರೇಡ್ ಪಾಯಿಂಟ್ ಎಣಿಕೆಯಲ್ಲಿನ ದೋಷದಿಂದಾಗಿ ಶ್ರೀಸೂರ್ಯತೇಜ .ಜಿ ಇವರಿಗೆ SKYWAY INTERNATION TRAVELS ಚಿನ್ನದ ಪದಕನೀಡುವ ಬದಲು, ಮತ್ತೊಬ್ಬ ವಿದ್ಯಾರ್ಥಿಯಾದ ಶ್ರೀ ಶರತ್ ಚನ್ನಪ್ಪ ಸಿ.ಸಿ. ರವರಿಗೆ ಚಿನ್ನದ ಪದಕ ನೀಡಿರುವ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ಸಿಂಡಿಕೇಟ್ ಈ ಕೆಳಕಂಡಂತೆ ನಿರ್ಣಯವನ್ನು ತೆಗೆದುಕೊಂಡಿತು.

1. 2016ನೇ ಸಾಲಿನಲ್ಲಿ ಎಂ.ಟಿ.ಎ.ಕೋರ್ಸಿನಲ್ಲಿ ಅತಿ ಹೆಚ್ಚು ಅಂಕ ಪಡೆದ (70.45) ಮಹಾರಾಜ ಕಾಲೇಜಿನ ವಿದ್ಯಾರ್ಥಿ ಶ್ರೀ ಶರತ್ ಚನ್ನಪ್ಪ ಸಿ.ಸಿ. ಇವರಿಗೆ ವಿಶ್ವವಿದ್ಯಾನಿಲಯವು ನೀಡಿರುವ ಚಿನ್ನದ ಪದಕವನ್ನು ಹಿಂಪಡೆಯಲು ಸಾಧ್ಯವಿಲ್ಲದಿರುವುದರಿಂದ ಸದರಿ ವಿದ್ಯಾರ್ಥಿಗೆ ಇನ್ನೂ ವಿತರಿಸದಿರುವ ಶ್ರೇಣಿ ಪ್ರಮಾಣ ಪತ್ರವನ್ನು ನೀಡದೇ ಇರಲು ಹಾಗೂ
2. ಶ್ರೀ ಸೂರ್ಯತೇಜ.ಜಿ. ಇವರು ಶ್ರೀ ಶರತ್ ಚನ್ನಪ್ಪ ಸಿ.ಸಿ. ಇವರು ಪಡೆದ ಅಂಕಗಳಿಗಿಂತ ಹೆಚ್ಚು ಅಂಕಗಳನ್ನು (77.90) ಪಡೆದಿರುವುದರಿಂದ, ಇವರಿಗೆ ಚಿನ್ನದ ಪದಕವನ್ನು ನೀಡುವುದರ ಜೊತೆಗೆ ಶ್ರೇಣಿ ಪ್ರಮಾಣ ಪತ್ರವನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು.

**2017/6.43** ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹೆಚ್ಚುವರಿ 20 ಮಂದಿ ಭದ್ರತಾ ಸಿಬ್ಬಂದಿಯನ್ನು ನೇಮಿಸಿರುವ ಬಗ್ಗೆ.

**ತೀರ್ಮಾನ** ದಿನಾಂಕ 19.01.2016ರ ಸಿಂಡಿಕೇಟ್ ಸಭೆಯ ನಿರ್ಣಯದನ್ವಯ, ಬಂದೂಕುದಾರಿ ಮಾಜಿ ಸೈನಿಕರನ್ನು ಸೈನಿಕ ಶಿಕ್ಷಣ ಇಲಾಖೆ ಒದಗಿಸದ ಹಿನ್ನೆಲೆಯಲ್ಲಿ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹೆಚ್ಚುವರಿ 20 ಮಂದಿ ಭದ್ರತಾ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ಷರತ್ತುಗಳನ್ವಯ ನೇಮಕ ಮಾಡಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

**2017/6.44** ವಿಶ್ವವಿದ್ಯಾನಿಲಯದಲ್ಲಿ ಕಾರ್ಯಗತಗೊಂಡಿರುವ ಯುಜಿಸಿ NET/K–SET ಕೇಂದ್ರದ ಸಂಯೋಜಕರಾಗಿ ಡಾ. ಬಿ. ಬಸವಲಿಂಗು, ನಿವೃತ್ತ ಪ್ರಾಧ್ಯಾಪಕರು, ಹಾಗೂ ಸಂಯೋಜಕರು ಇವರನ್ನು ನೇಮಕ ಮಾಡಿರುವ ಬಗ್ಗೆ.

| | |
|---|---|
| ತೀರ್ಮಾನ | ಸುದೀರ್ಘ ಚರ್ಚೆಯ ನಂತರ ಸಭೆಯು ಈ ಕೆಳಕಂಡಂತೆ ನಿರ್ಣಯಗಳನ್ನು ಕೈಗೊಂಡಿತು.<br>1. ಕರ್ನಾಟಕ ಸರ್ಕಾರದ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ದಿನಾಂಕ 02–03–2016 ರಂದು ಹೊರಡಿಸಲಾದ ಸುತ್ತೋಲೆಯಲ್ಲಿ ನಿವೃತ್ತಿ ಹೊಂದಿದ ನೌಕರರ ಪುನರ್ ನೇಮಕ ಮಾಡುವಂತಿಲ್ಲ ಎಂದು ತಿಳಿಸಿರುವುದರಿಂದ ಡಾ. ಬಿ.ಬಸವಲಿಂಗು ರವರನ್ನು ಯುಜಿಸಿ NET/K–SET ಕೇಂದ್ರದ ಸಂಯೋಜಕರಾಗಿ ನೇಮಕಗೊಂಡಿದ್ದು ಸದರಿಯವರನ್ನು ಸಂಯೋಜಕ ಹುದ್ದೆಯಿಂದ ಬಿಡುಗಡೆಗೊಳಿಸಿ, ನಿಯಮಾನುಸಾರ ಸೂಕ್ತ ಅಭ್ಯರ್ಥಿಯನ್ನು ಆಯ್ಕೆ ಮಾಡಲು;<br>2. ಡಾ. ಬಿ. ಬಸವಲಿಂಗುರವರು ಯುಜಿಸಿ ವತಿಯಿಂದ 2015–17ನೇ ಸಾಲಿಗೆ Emeritus Fellowship ಗೆ ಆಯ್ಕೆಯಾಗಿದ್ದು, ಇವರು ದಿನಾಂಕ 31.12.2015 ರಂದು ಸದರಿ ಫೆಲೋಶಿಫ್‌ಗೆ ವರದಿ ಮಾಡಿಕೊಂಡಿರುತ್ತಾರೆ. ಫೆಲೋಶಿಫ್‌ನ ಮಾರ್ಗಸೂಚಿ ಕಂಡಿಕೆ 8(i) ಯ ಪ್ರಕಾರ, ಸದರಿ ಫೆಲೋಶಿಫ್‌ನಲ್ಲಿ ಆಯ್ಕೆಯಾದವರು ಬೇರೆ ಯಾವುದೇ ಹುದ್ದೆ ಹಾಗೂ ನೇಮಕಾತಿ ಹೊಂದಿರಬಾರದು. ಆದರೆ ಡಾ.ಬಿ.ಬವಸಲಿಂಗುರವರು ಫೆಲೋಶಿಪ್‌ಗೆ ವರದಿ ಮಾಡಿಕೊಂಡಿದ್ದುದಲ್ಲದೆ, ವಿಶ್ವವಿದ್ಯಾನಿಲಯದಲ್ಲಿ ನೇಮಕಾತಿಯನ್ನು ಹೊಂದಿದ್ದು ಕಂಡು ಬಂದಿರುವುದರಿಂದ ಸದರಿರವರು ತಮ್ಮ ಹುದ್ದೆಯಲ್ಲಿ ಪಡೆಯುತ್ತಿದ್ದ ಗೌರವಧನವನ್ನು ವಸೂಲು ಮಾಡಲು; ಮತ್ತು<br>3. ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸಿನ ವ್ಯವಹಾರಗಳು ಕುಲಸಚಿವರು ಹಾಗೂ ಹಣಕಾಸಿನ ಅಧಿಕಾರಿಗಳಿಂದ ಮಾತ್ರ ನಡೆಯತಕ್ಕದ್ದು. ವಿಶ್ವವಿದ್ಯಾನಿಲಯದ ಯಾವುದೇ ವಿಭಾಗ/ಕೇಂದ್ರದಲ್ಲಿನ ಹಣಕಾಸಿನ ವ್ಯವಹಾರಗಳನ್ನು ಆಯಾ ಕೇಂದ್ರದ ಮುಖ್ಯಸ್ಥರುಗಳು ತಮ್ಮ ಹೆಸರಿನ ಖಾತೆಯಲ್ಲಿ ನಡೆಸುವಂತಿಲ್ಲ. ಇದರ ಬಗ್ಗೆ ವಿವರವಾದ ಪಟ್ಟಿಯನ್ನು ಎಲ್ಲಾ ಕೇಂದ್ರದ/ಇನ್ನಿತರ ವಿಭಾಗಗಳ ಮುಖ್ಯಸ್ಥರುಗಳಿಂದ ಪಡೆದು ಸೂಕ್ತ ಕ್ರಮಕೈಗೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| 2017/6.45 | ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಹುದ್ದೆಗಳಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳ ವಿವರ |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿವಿಧ/ಸ್ನಾತಕ/ಸ್ನಾತಕೋತ್ತರ ವಿಭಾಗಗಳಲ್ಲಿ ಆಡಳಿತಾತ್ಮಕ ಹುದ್ದೆಗಳಲ್ಲಿ ಮೂರು ವರ್ಷದಿಂದ ಸೇವೆ ಸಲ್ಲಿಸುತ್ತಿರುವ ಅಧ್ಯಾಪಕರುಗಳನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಂಬಂಧಪಟ್ಟ ಮಾತೃ ಇಲಾಖೆಗಳಿಗೆ ಹಿಂದಿರುಗಿಸುವ ಬಗ್ಗೆ ವಿಶ್ವವಿದ್ಯಾನಿಲಯವು ತೆಗೆದುಕೊಂಡ ಕ್ರಮವನ್ನು ಸಿಂಡಿಕೇಟ್ ಅನುಮೋದಿಸಿತು. |
| 2017/6.46 | ಶ್ರೀ ಶಂಕರ್, ಕಿರಿಯ ಸಹಾಯಕರು, ಕುವೆಂಪು ವಿಶ್ವವಿದ್ಯಾನಿಲಯ, ಇವರನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ನಿಯೋಜನೆ ಮಾಡುವ ಬಗ್ಗೆ. |
| ತೀರ್ಮಾನ | ಶ್ರೀಯುತರ ಸೇವಾ ಅವಧಿಯು ಇನ್ನೂ ಮೂರೇ ವರ್ಷಗಳಿರುವುದರಿಂದ ಕುವೆಂಪು ವಿಶ್ವವಿದ್ಯಾನಿಲಯದಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಖಾಲಿ ಇರುವ ಎರಡನೇ ದರ್ಜೆ ಗುಮಾಸ್ತ ಹುದ್ದೆಯ ಎದುರಿಗೆ ನಿಯೋಜನೆ ಮೇಲೆ ವರ್ಗಾಯಿಸಿ ಸದರಿಯವರು ನಿವೃತ್ತಿ ಹೊಂದುವ 3 ತಿಂಗಳು ಮುಂಚಿತವಾಗಿ ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಹಿಂದಿರುಗಿಸಿ ಪಿಂಚಣಿ ಸೌಲಭ್ಯಗಳನ್ನು ಅವರ ಮಾತೃ ಸಂಸ್ಥೆಯಲ್ಲೇ ಪಡೆಯಬಹುದಾಗಿದೆ ಎಂಬ ಷರತ್ತಿನೊಡನೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| 2017/6.47 | ಮೈಸೂರು ವಿಶ್ವವಿದ್ಯಾನಿಲಯದ ಔಟ್‌ರೀಚ್ ಮತ್ತು ಸ್ಪೆಷಲೈಜ್ಡ್ ಪ್ರೊಗ್ರಾಂಗಳ ಬಗ್ಗೆ. |
| ತೀರ್ಮಾನ | ಸಂಪೂರ್ಣ ವಿವರಗಳೊಡನೆ ಮರುಮಂಡಿಸಲು ತೀರ್ಮಾನಿಸಲಾಯಿತು. |

| | |
|---|---|
| 2017/6.48 | ಮಹಾರಾಜ ಕಾಲೇಜು ಕ್ರಿಕೆಟ್ ಮೈದಾನವನ್ನು ಕೆ.ಎಸ್.ಸಿ.ಎ.ಗೆ ನೀಡಿರುವ ಒಪ್ಪಂದದ ಬಗ್ಗೆ. |
| ತೀರ್ಮಾನ | ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಸಲುವಾಗಿ ಪೂರ್ಣ ಮಾಹಿತಿಯೊಂದಿಗೆ ವಿಷಯವನ್ನು ಮರುಮಂಡಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| 2017/6.49 | ಶ್ರೀ ಡಿ. ದೇವರಾಜು ಅರಸು ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಶ್ರೀ ಡಿ.ದೇವರಾಜು ಅರಸು ಪೀಠದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಎಸ್.ಪಿ.ಹೊನ್ನೂರು ಇವರ ನೇಮಕಾತಿ ಅವಧಿಯು ದಿನಾಂಕ 22-01-2017ರಂದು ಪೂರ್ಣಗೊಂಡಿರುವುದರಿಂದ ಅವರ ಸ್ಥಾನಕ್ಕೆ ನೇಮಕ ಮಾಡಲು ವಿಶ್ವವಿದ್ಯಾನಿಲಯವು ಸಲ್ಲಿಸಿದ ಸಂದರ್ಶಕ ಪ್ರಾಧ್ಯಾಪಕರ ಪಟ್ಟಿಯಲ್ಲಿ ಡಾ. ಕೆ.ವಿ.ಅಯ್ಯಣ್ಣ, ನಿವೃತ್ತ ಪ್ರಾದ್ಯಾಪಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಒಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಕ ಮಾಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2017/6.50 | ಸಂಶೋಧನೆಗೆ ಹೆಚ್ಚುವರಿಯಾಗಿ ನೊಂದಣಿಯಾಗಿರುವ ಕೆಲವು ವಿದ್ಯಾರ್ಥಿಗಳ ಬಗ್ಗೆ. |
| ತೀರ್ಮಾನ | ಸುದೀರ್ಘ ಚರ್ಚೆಯ ನಂತರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕೇಂದ್ರದಿಂದ ಹಾಗೂ ಅಭಿವೃದ್ಧಿ ವಿಭಾಗದಲ್ಲಿನ ಒಬ್ಬ ವಿದ್ಯಾರ್ಥಿಗೆ ಒಟ್ಟಾರೆ ಐದು ವಿದ್ಯಾರ್ಥಿಗಳಿಗೆ ತಾತ್ಕಾಲಿಕವಾಗಿ ನೋಂದಣಿಗೆ (One time measure) ಅವಕಾಶ ಕಲ್ಪಿಸಿ ಫೆಲೋಶಿಪ್ ಪಡೆಯಲು ಅನುವಾಗುವಂತೆ ಮಾಡಿ ಖಾಯಂ ನೋಂದಣಿಯ ಸಂದರ್ಭದಲ್ಲಿ ಪಿಎಚ್.ಡಿ. ನಿಯಮಾವಳಿಯನ್ನು ಕಟ್ಟುನಿಟ್ಟಾಗಿ ಪಾಲಿಸುವ ಷರತ್ತಿಗೊಳಪಟ್ಟು 10ನೇ ಅಭ್ಯರ್ಥಿಯಾಗಿ ಆರ್.ಜಿ.ಎನ್.ಎಫ್ ಸಂಶೋಧನಾ ವಿದ್ಯಾರ್ಥಿಯಾಗಿ ಕಾರ್ಯನಿರ್ವಹಿಸಲು ಸಿಂಡಿಕೇಟ್ ಅನುಮತಿಸಿತು. |
| 2017/6.51 | ಮಾನಸಗಂಗೋತ್ರಿಯಲ್ಲಿ ವಿ.ವಿ ಗ್ರಂಥಾಲಯದ ಮುಂದೆ ಡಾ. ಬಿ.ಆರ್. ಅಂಬೇಡ್ಕರ್‌ರವರ ಪುತ್ಥಳಿಯನ್ನು ಸ್ಥಾಪಿಸಬೇಕೆಂದು ಕೋರಿರುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯಲ್ಲಿ ವಿ.ವಿ.ಗ್ರಂಥಾಲಯದ ಮುಂದೆ ಡಾ. ಬಿ.ಆರ್.ಅಂಬೇಡ್ಕರ್‌ರವರ ಪುತ್ಥಳಿಯನ್ನು ಸ್ಥಾಪಿಸುವುದರ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು ಅನುಮತಿ ಪಡೆದ ನಂತರ ಪುತ್ಥಳಿಯ ರಚನೆಯ ಬಗ್ಗೆ ಒಂದು ಸಮಿತಿ ರಚಿಸಿ ತೀರ್ಮಾನವನ್ನು ಕೈಗೊಳ್ಳಲು ಸಿಂಡಿಕೇಟ್ ನಿರ್ಣಯಿಸಿತು. |
| 2017/6.52 | ಕು. ಕಾವ್ಯಶ್ರೀ ಹೆಚ್.ಎಸ್. ತಾತ್ಕಲಿಕ ಬೆರಳಚ್ಚುಗಾರರು ಹಾಗೂ ಗುಮಾಸ್ತರು, ಸರ್. ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ಮಂಡ್ಯ, ಇವರು ಸಲ್ಲಿಸಿರುವ ದೂರಿನ ಬಗ್ಗೆ. |
| ತೀರ್ಮಾನ | ಸಂಪೂರ್ಣ ವಿವರಗಳೊಡನೆ ಮರುಮಂಡಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| 2017/6.53 | ಡಾ. ಸ್ವರೂಪ್ ಟಿ.ಆರ್. ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರು, ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರು ಶಾಸ್ತ್ರಿ ಇಂಡೋ – ಕೆನಡಿಯನ್ ಪೋಸ್ಟ್ ಡಾಕ್ಟೋರಲ್ ಫೆಲೋಶಿಪ್‌ನ ಆಡಿಯಲ್ಲಿ ಕೆನಡಾಗೆ ತೆರಳಲು ಅನುಮತಿ ಕೋರಿರುವ ಬಗ್ಗೆ. |

| | |
|---|---|
| ತೀರ್ಮಾನ | ಡಾ. ಸ್ವರೂಪ್ ಟಿ.ಆರ್. ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರು, ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ 16–06–2017 ರಿಂದ 28–08–2017ರವರೆಗೆ Shastri Research Student Fellowship for PDF ಫೆಲೋಶಿಫ್‌ನ ಹಿನ್ನೆಲೆಯಲ್ಲಿ, ವಿಭಾಗದಲ್ಲಿನ ಶೈಕ್ಷಣಿಕ ಚಟುವಟಿಕೆಗಳಿಗೆ ಧಕ್ಕೆಯೊದಗದಂತೆ, ವೇತನ ರಹಿತವಾಗಿ ಕೆನಡಾ ದೇಶಕ್ಕೆ ಭೇಟಿ ನೀಡಲು ಸಿಂಡಿಕೇಟ್ ಒಪ್ಪಿಗೆ ನೀಡಿತು. |
| 2017/6.54 | ಡಾ. ಬಸಪ್ಪ, ಸಹಾಯಕ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು ಅವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹುದ್ದೆರಹಿತವಾಗಿ ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆಯಾಗಿ ಬಂದಿರುವ ಸಂಬಂಧ ಸ್ಥಳನಿಯುಕ್ತಿಗೊಳಿಸುವ ಬಗ್ಗೆ. |
| ತೀರ್ಮಾನ | ಸಿಂಡಿಕೇಟ್ ತೀರ್ಮಾನವನ್ನು ಕಾಯ್ದಿರಿಸಿ, ಡಾ. ಬಸಪ್ಪ, ಸಹಾಯಕ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು ಅವರು ಮೈಸೂರು ವಿಶ್ವವಿದ್ಯಾನಿಲಯದ ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ತೆಗೆದುಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.<br>ಮತ್ತು ಪ್ರೊ. ಕೆ.ಎಂ.ಲೋಕನಾಥ ರೈ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ ಅವರ ನಿವೃತ್ತಿಯಿಂದ ತೆರವಾದ ಹುದ್ದೆಯನ್ನು ಸಾವಯವ ಅಧ್ಯಯನ ವಿಭಾಗಕ್ಕೆ ರಿ–ಡಿಪ್ಲಾಯ್ ಮಾಡಿ ಸರ್ಕಾರದ ಆದೇಶದನ್ವಯ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಹುದ್ದೆರಹಿತವಾಗಿ ವರ್ಗಾವಣೆಗೊಂಡಿರುವ ಡಾ. ಬಸಪ್ಪ, ಸಹಾಯಕ ಪ್ರಾಧ್ಯಾಪಕರು ಇವರನ್ನು ಸದರಿ ಹುದ್ದೆಗೆ ಎದುರಾಗಿ ಪರಿಗಣಿಸಲು ಸಿಂಡಿಕೇಟ್ ತೀರ್ಮಾನಿಸಿತು. ಹಾಗೂ<br>ಸದರಿಯವರು ಅವರ ಸ್ವ–ಇಚ್ಛೆಯಿಂದ ಮನವಿ ಸಲ್ಲಿಸಿ ವರ್ಗಾವಣೆಯಾಗಿರುವುದರಿಂದ ಅವರನ್ನು ರಸಾಯನಶಾಸ್ತ್ರ ಅಧ್ಯಯನ ವಿಭಾಗ ಮತ್ತು ಇತರೆ ವಿಭಾಗಗಳ ಸಹಾಯಕ ಅಧ್ಯಾಪಕರ ನಂತರ ಅವರ ಜ್ಯೇಷ್ಠತೆಯನ್ನು ಪರಿಗಣಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| 2017/6.55 | ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯ ಪುರುಷರ ಖೋ–ಖೋ ಮತ್ತು ಅಖಿಲ ಭಾರದ ಅಂತರ ವಿಶ್ವವಿದ್ಯಾನಿಲಯ ಪುರುಷರ/ಮಹಿಳೆಯರ ಖೋ–ಖೋ ಪಂದ್ಯಾವಳಿಗಳನ್ನು ನಡೆಸುವ ಬಗ್ಗೆ. |
| ತೀರ್ಮಾನ | (see table and text below) |

| ಕ್ರಮ ಸಂಖ್ಯೆ | ಪಂದ್ಯಾವಳಿಗಳ ವಿವರ | ಅಂದಾಜು ಮೊತ್ತ (ರೂ.ಗಳಲ್ಲಿ) |
|---|---|---|
| 1. | ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಖೋ–ಖೋ ಪಂದ್ಯಾವಳಿ | 16,13,000=00 |
| 2 | ದಕ್ಷಿಣ ವಲಯ ಮತ್ತು ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಪುರುಷರ ಖೋ–ಖೋ ಪಂದ್ಯಾವಳಿ | 18,47,000=00 |
| | ಒಟ್ಟು ರೂ. | 34,60,000=00 |

2017–18ನೇ ಶೈಕ್ಷಣಿಕ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಮಹಿಳೆಯರ ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯ ಹಾಗೂ ಪುರುಷರ ದಕ್ಷಿಣ ವಲಯ ಮತ್ತು ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಖೋ–ಖೋ ಪಂದ್ಯಾವಳಿಗಳನ್ನು ಒಟ್ಟು ಅಂದಾಜು ಮೂವತ್ತನಾಲ್ಕು ಲಕ್ಷದ ಅರವತ್ತು ಸಾವಿರ ರೂಪಾಯಿಗಳ ಮಿತಿಯೊಳಗೆ ನಡೆಸಲು ಸಿಂಡಿಕೇಟ್ ಒಪ್ಪಿಗೆ ನೀಡಿತು.

| | |
|---|---|
| 2017/6.56 | ಮೈಸೂರು ವಿಶ್ವವಿದ್ಯಾನಿಲಯದ ಲಲಿತ ಕಲೆಗಳ ಕಾಲೇಜನ್ನು ಕರ್ನಾಟಕ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸುವ ಸಂಬಂಧ ಸರ್ಕಾರದಿಂದ ಬಂದಿರುವ ಪ್ರಸ್ತಾವನೆ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯವು ನಾಲ್ವಡಿ ಕೃಷ್ಣರಾಜ ಒಡೆಯರ್‌ರವರಿಂದ ಸ್ಥಾಪಿತವಾಗಿದ್ದು ಮೈಸೂರು ಸಂಸ್ಥಾನವು ಲಲಿತ ಕಲೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದುದ್ದರಿಂದ ಅವರ ನೆನಪಾಗಿ ಲಲಿತ ಕಾಲೇಜನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜಾಗಿ ಪ್ರಾರಂಭಿಸಿ ಹಲವಾರು ಮಹನೀಯರುಗಳು ಸೇವೆ ಸಲ್ಲಿಸುತ್ತಾ ಬಂದಿರುವುದರ ಬಗ್ಗೆ ಚರ್ಚಿಸಿದ ಸಿಂಡಿಕೇಟ್ ಸದರಿ ಕಾಲೇಜಿನಲ್ಲಿ ಒಡೆಯರ್ ವಂಶಸ್ಥರ ಹಲವು ಕಾರ್ಯಕ್ರಮಗಳಿರುವುದರಿಂದ ಲಲಿತ ಕಲೆಗಳ ಕಾಲೇಜನ್ನು ವಿಶ್ವವಿದ್ಯಾನಿಲಯದಲ್ಲೇ ಉಳಿಸಿಕೊಳ್ಳುವ ಅಭಿಪ್ರಾಯವನ್ನು ಸರ್ಕಾರಕ್ಕೆ ಬಹಳ ವಿನಮ್ರವಾಗಿ ಸಲ್ಲಿಸಲು ಸಿಂಡಿಕೇಟ್ ತೀರ್ಮಾನಿಸಿತು |
| 2017/6.57 | ಹೊಸದಾಗಿ ಆರಂಭಗೊಂಡಿರುವ ಐದು ಸ್ನಾತಕೋತ್ತರ ಅಧ್ಯಯನ ವಿಭಾಗಗಳಾದ Genetics & Genomics, Molecular Biology, Organic Chemistry Public Administration & School of Lawಗೆ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಬಗ್ಗೆ. |
| ತೀರ್ಮಾನ | ಮತ್ತಷ್ಟು ವಿವರಗಳೊಡನೆ ವಿಷಯವನ್ನು ಮರುಮಂಡಿಸಲು ತೀರ್ಮಾನಿಸಲಾಯಿತು. |
| 2017/6.58 | ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್‌ಗೆ ಡಾ. ಕೃಷ್ಣೇಗೌಡ, ನಿವೃತ್ತ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನು ನೇಮಕ ಮಾಡಿರುವ ಬಗ್ಗೆ. |
| ತೀರ್ಮಾನ | ಕರ್ನಾಟಕ ಸರ್ಕಾರದ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ದಿನಾಂಕ 02-03-2016 ರಂದು ಹೊರಡಿಸಲಾದ ಸುತ್ತೋಲೆಯಲ್ಲಿ ನಿವೃತ್ತಿ ಹೊಂದಿದ ನೌಕರರ ಪುನರ್ ನೇಮಕ ಮಾಡುವಂತಿಲ್ಲ ಎಂದು ತಿಳಿಸಿರುವುದರಿಂದ ಡಾ. ಕೃಷ್ಣೇಗೌಡ, ನಿವೃತ್ತ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ನೇಮಕಾತಿಯನ್ನು ರದ್ದುಪಡಿಸಿ, ನಿಯಮಾನುಸಾರ ಅರ್ಹ ಅಭ್ಯರ್ಥಿಯನ್ನು ಆಯ್ಕೆ ಮಾಡಿ ನೇಮಕಾತಿ ಮಾಡಿಕೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |

**ಇತರೆ ವಿಷಯಗಳು:**

1. ಒಂದೇ ರೀತಿಯಲ್ಲಿ ಬೋಧಕ/ಬೋಧಕೇತರ ಉದ್ಯೋಗಿಗಳಿಗೆ ಸಂಬಂಧಪಟ್ಟಂತೆ Seniority List ಅನ್ನು common ಆಗಿ ನಿಯಮಾನುಸಾರ ರಚಿಸಿ, ಅದನ್ನು ವೆಬ್‌ಸೈಟ್ ಹಾಗೂ ಮ್ಯಾನುಯಲ್ ನಲ್ಲಿ ಪ್ರಕಟಿಸಲು ಸಭೆಯು ನಿರ್ಧರಿಸಿತು.

2. ಸಿಂಡಿಕೇಟ್ ಸಭೆಗೆ ಹಾಜರಾಗುವ ಸದಸ್ಯರುಗಳ Sitting Fees ರೂ. 3,500/-ಗಳ ಬದಲಾಗಿ ರೂ.5,000/-ಗಳಿಗೆ ಗೌರವ ಧನವನ್ನು ನೀಡಲು ಸಭೆಯು ತೀರ್ಮಾನಿಸಿತು.

3. 2016-17ನೇ ಸಾಲಿನಲ್ಲಿ ಮೌಲ್ಯಮಾಪನ ಕಾರ್ಯ ಮಾಡಿದ ಯುಜಿಸಿ ಉಪನ್ಯಾಸಕರುಗಳಿಗೆ ಸಂಭಾವನೆಯನ್ನು ಈ ಬಾರಿ ಮಾತ್ರ ನೀಡಲಾಗುವುದು. ಆದರೆ, ಯುಜಿಸಿ ನಿಯಮಾನುಸಾರ ಮುಂದಿನ ವರ್ಷದಿಂದ ಪರೀಕ್ಷಾ ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸುವ ಯುಜಿಸಿ ಉಪನ್ಯಾಸಕರುಗಳಿಗೆ ಕಟ್ಟುನಿಟ್ಟಾಗಿ ಸಂಭಾವನೆಯನ್ನು ನೀಡದಿರುವ ಬಗ್ಗೆ ಅವಶ್ಯ ಅಂಶಗಳೊಡನೆ ಸುತ್ತೋಲೆ ಹೊರಡಿಸಲು ಅಗತ್ಯಕ್ರಮ ವಹಿಸುವಂತೆ ಸಭೆಯು ನಿರ್ಣಯಿಸಿತು.

4. ಡಾ. ನಾಗರಾಜ ಮೂರ್ತಿರವರನ್ನು ಕರ್ನಾಟಕ ಸರ್ಕಾರದ ಆದೇಶದ ಮೇರೆಗೆ ಮಹಾರಾಜ ಕಾಲೇಜಿನ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುವುದಕ್ಕೆ ಆದೇಶಿಸುವ ಸಂಬಂಧ ಸಂಪೂರ್ಣ ವಿಷಯ ಮಂಡನೆಯೊಂದಿಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲು ನಿರ್ಧರಿಸಿತು.

5. ವಿಶ್ವವಿದ್ಯಾನಿಲಯದಲ್ಲಿ ನಡೆದ ಭಾರತೀಯ ವಿಜ್ಞಾನ ಕಾಂಗ್ರೆಸ್ ಕಾರ್ಯಕ್ರಮಕ್ಕೆ ಹೆಚ್ಚುವರಿಯಾಗಿ ರೂ.9,15,45,000/-ಗಳಿಗೆ ಡಾ. ಬಸವರಾಜು, ಕುಲಸಚಿವರು ಇವರ ಅನುಪಸ್ಥಿತಿಯಲ್ಲಿ ಕುಲಸಚಿವರು(ಪರೀಕ್ಷಾಂಗ) ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ. ಆರ್.ರಾಜಣ್ಣ, ಇವರು ಸಹಿ ಮಾಡಿ, ಆದೇಶ ನೀಡಿರುವ ಬಗ್ಗೆ ಸಭೆಯು ಸುಧೀರ್ಘವಾಗಿ ಚರ್ಚಿಸಿ, ಡಾ. ಆರ್.ರಾಜಣ್ಣರವರಿಗೆ ಷೋಕಾಸ್ ನೋಟೀಸ್ ಜಾರಿಮಾಡಿ ಏಳು ದಿವಸಗಳೊಳಗಾಗಿ ಉತ್ತರವನ್ನು ಪಡೆಯಲು ಸಭೆಯು ನಿರ್ಣಯಿಸಿತು.

6. ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಉದ್ಯೋಗಿಗಳ ನೇಮಕಾತಿ ಬಗ್ಗೆ ವಿಚಾರಣೆ ನಡೆಯುತ್ತಿರುವುದರಿಂದ, ಸದರಿ ನೌಕರರುಗಳಿಗೆ ಸಂಭಾವನೆಯನ್ನು ನೀಡುವ ಬಗ್ಗೆ ಕಾನೂನು ಪರಿಣಿತರ ಸಲಹೆಯನ್ನು ಪಡೆಯಲು ಸಭೆಯು ತೀರ್ಮಾನಿಸಿತು.

7. ವಿಶ್ವವಿದ್ಯಾನಿಲಯದ ವಾಹನಗಳನ್ನು ಗೆಜೆಟೆಡ್ ಅಧಿಕಾರಿಗಳು ಮಾತ್ರ ಬಳಸಬೇಕೆಂಬ ನಿಯಮವಿರುವುದರಿಂದ, ಸದರಿ ವಾಹನಗಳನ್ನು ಬಳಸುತ್ತಿರುವ ಅಧಿಕಾರಿಗಳ ಬಗ್ಗೆ ಕುಲಸಚಿವರು ಪರಿಶೀಲಿಸಿ, ಕ್ರಮವನ್ನು ಕೈಗೊಳ್ಳಬೇಕೆಂದು ಸಿಂಡಿಕೇಟ್ ಸೂಚಿಸಿತು.

8. ಪಂಪಾಪತಿ ರಸ್ತೆಯಲ್ಲಿರುವ ಅಧಿಕಾರಿಗಳ ವಸತಿಗೃಹಗಳ (Designated Quatres) ಹಂಚಿಕೆಯ ಬಗ್ಗೆ ಪರಿಶೀಲಿಸಿ, ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ಸಭೆಯು ಕುಲಸಚಿವರಿಗೆ ಸೂಚಿಸಿತು.

ಮುಂದಿನ ವಿಶೇಷ ಸಿಂಡಿಕೇಟ್ ಸಭೆಯನ್ನು ನಡೆಸಲು ದಿನಾಂಕವನ್ನು ನಿಗದಿಪಡಿಸುವ ಅಧಿಕಾರವನ್ನು ಕುಲಪತಿಗಳಿಗೆ ನೀಡಲಾಯಿತು.

ಕೊನೆಯಲ್ಲಿ ನಾಲ್ಕನೇ ಸಾಮಾನ್ಯ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಲಹೆ ಸಹಕಾರಗಳನ್ನು ನೀಡಿ ತೀರ್ಮಾನ ಕೈಗೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೆ ಮಾನ್ಯ ಕುಲಪತಿಗಳು ವಂದನೆ ಸಲ್ಲಿಸಿ, ದ ನಂತರ ಸಭೆಯನ್ನು ಮುಕ್ತಾಯಗೊಳಿಸಿದರು.

**ಕುಲಸಚಿವ ಮತ್ತು ಸದಸ್ಯಕಾರ್ಯದರ್ಶಿ** **ಕುಲಪತಿ ಮತ್ತು ಅಧ್ಯಕ್ಷರು**

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು
ದಿನಾಂಕ 17-07-2017

ಸಂ.ಯುಎ1/102/2017-18

## ತಿದ್ದುಪಡಿ

ಸಿಂಡಿಕೇಟ್ ಸದಸ್ಯರುಗಳಿಗೆ,

ವಿಷಯ: ದಿನಾಂಕ 22-06-2017 ರಂದು ಜರುಗಿದ ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆಯ ನಡಾವಳಿಗಳ ವಿಷಯ ಸಂಖ್ಯೆ 2017/6.45ರ ತಿದ್ದುಪಡಿ ಬಗ್ಗೆ.
ಉಲ್ಲೇಖ: ಈ ಕಛೇರಿಯ ಪತ್ರ ಸಮ ಸಂಖ್ಯೆ ದಿನಾಂಕ: 05-07-2017

-----

ದಿನಾಂಕ 22-06-2017 ರಂದು ಜರುಗಿದ ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ಉಲ್ಲೇಖಿತ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲಾಗಿತ್ತು; ಅದರಲ್ಲಿ ವಿಷಯ ಸಂಖ್ಯೆ 2017/6.45 ಕ್ಕೆ ಸಂಬಂಧಿಸಿದ ವಿಷಯ ಹಾಗೂ ನಡಾವಳಿಗಳ ವಿವರ ಕೆಳಕಂಡಂತಿದೆ;

| ವಿಷಯ ಸಂಖ್ಯೆ & ವಿಷಯ | ನಡಾವಳಿಗಳಲ್ಲಿ ದಾಖಲಾಗಿರುವ ತೀರ್ಮಾನ |
|---|---|
| 2017/6.45 & ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಹುದ್ದೆಗಳಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳ ವಿವರ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿವಿಧ/ಸ್ನಾತಕ/ ಸ್ನಾತಕೋತ್ತರ ವಿಭಾಗಗಳಲ್ಲಿ ಆಡಳಿತಾತ್ಮಕ ಹುದ್ದೆಗಳಲ್ಲಿ ಮೂರು ವರ್ಷದಿಂದ ಸೇವೆ ಸಲ್ಲಿಸುತ್ತಿರುವ ಅಧ್ಯಾಪಕರುಗಳನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಂಬಂಧಪಟ್ಟ ಮಾತೃ ಇಲಾಖೆಗಳಿಗೆ ಹಿಂದಿರುಗಿಸುವ ಬಗ್ಗೆ ವಿಶ್ವವಿದ್ಯಾನಿಲಯವು ತೆಗೆದುಕೊಂಡ ಕ್ರಮವನ್ನು ಸಿಂಡಿಕೇಟ್ ಅನುಮೋದಿಸಿತು. |

ಸದರಿ ನಡಾವಳಿಗಳನ್ನು ಕೆಳಗಿನಂತೆ ತಿದ್ದುಪಡಿ ಮಾಡಲಾಗಿದ್ದು, ಅದರಂತೆ ಓದಿಕೊಳ್ಳುವುದು;

| 2017/6.45 | ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಹುದ್ದೆಗಳಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳ ವಿವರ |
|---|---|
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿವಿಧ ಸ್ನಾತಕ/ಸ್ನಾತಕೋತ್ತರ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧ್ಯಾಪಕರುಗಳು ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಹುದ್ದೆಗಳಲ್ಲಿ ಮೂರು ವರ್ಷಗಳು ಹಾಗೂ ಅದಕ್ಕೂ ಮಿಗಿಲಾಗಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಅಥವಾ ಮೂರು ವರ್ಷಗಳನ್ನು ಪೂರೈಸಿದಾಗ ಮತ್ತು ಇಂತಹುದೇ ಪ್ರಕರಣಗಳಡಿ ಹೆಸರುಗಳು ಬಿಟ್ಟು ಹೋಗಿದ್ದಲ್ಲಿ ಅಂತಹ ಅಧ್ಯಾಪಕರುಗಳನ್ನು ಸಹ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಅವರವರ ಮಾತೃ ಇಲಾಖೆಯ ಮೂಲಹುದ್ದೆಗಳಿಗೆ ಹಿಂದಿರುಗಿಸಲು ಸಿಂಡಿಕೇಟ್ ತೀರ್ಮಾನಿಸಿತು. |

| ಕ್ರ ಸಂ. | ಹೆಸರು ಮತ್ತು ಹುದ್ದೆ | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ | ನಿಯೋಜನೆಗೊಂಡ ದಿನಾಂಕ |
|---|---|---|---|
| 1. | ಡಾ. ಕೆ.ಬಿ. ಉಮೇಶ್<br>ಸಹ ಪ್ರಾಧ್ಯಾಪಕರು<br>ರಸಾಯನಶಾಸ್ತ್ರ ವಿಭಾಗ<br>ಯುವರಾಜ ಕಾಲೇಜು | ವಿಶೇಷ ಅಧಿಕಾರಿಗಳು<br>ಪಿಹೆಚ್.ಡಿ. ವಿಭಾಗ<br>ಪರೀಕ್ಷಾ ಶಾಖೆ | 05-10-2013ರಿಂದ 26-04-2016 ರವರೆಗೆ ಪ.ಜಾ/ಪವ ವಿಶೇಷ ಘಟಕದ ಉಪಕುಲಸಚಿವರಾಗಿ ಕಾರ್ಯನಿರ್ವಹಿಸಿ ಪ್ರಸ್ತುತ ಪಿಹೆಚ್.ಡಿ. ವಿಭಾಗದ ವಿಶೇಷಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. |

P.T.O...

| | | | |
|---|---|---|---|
| 2. | ಡಾ. ಎಸ್.ಜಯರಾಮು<br>ಸಹ ಪ್ರಾಧ್ಯಾಪಕರು<br>ಪ್ರಾಣಿಶಾಸ್ತ್ರ ವಿಭಾಗ<br>ಯುವರಾಜ ಕಾಲೇಜು | ಎಸ್ಟೇಟ್ ಅಧಿಕಾರಿಗಳು<br>ಆಡಳಿತ ಶಾಖೆ | 15-07-2014ರಿಂದ ಇಲ್ಲಿಯವರೆಗೆ |
| 3. | ಡಾ. ಎಂ.ರುದ್ರಯ್ಯ<br>ಸಹ ಪ್ರಾಧ್ಯಾಪಕರು<br>ಭೂವಿಜ್ಞಾನ ವಿಭಾಗ<br>ಯುವರಾಜ ಕಾಲೇಜು | ನಿರ್ದೇಶಕರು<br>ವಿದ್ಯಾರ್ಥಿ ಕ್ಷೇಮಪಾಲನ<br>ಕಛೇರಿ ಮಾನಸಗಂಗೋತ್ರಿ<br>ಮೈಸೂರು | 06-12-2013ರಿಂದ ಇಲ್ಲಿಯವರೆಗೆ |
| 4. | ಡಾ. ಸಿ.ರಾಮಸ್ವಾಮಿ<br>ಸಹ ಪ್ರಾಧ್ಯಾಪಕರು<br>ಮನೋವಿಜ್ಞಾನ ವಿಭಾಗ<br>ಮಹಾರಾಜ ಕಾಲೇಜು | ಆಡಳಿತಾಧಿಕಾರಿ<br>ಮಾನಸಗಂಗೋತ್ರಿ<br>ಮೈಸೂರು | 25-08-2014ರಿಂದ ಇಲ್ಲಿಯವರೆಗೆ |
| 5. | ಡಾ. ಶಿವಚಿತ್ತಪ್ಪ<br>ಸಹಪ್ರಾಧ್ಯಾಪಕರು<br>ಅರ್ಥಶಾಸ್ತ್ರ ವಿಭಾಗ<br>ಸ್ನಾತಕೋತ್ತರ ಕೇಂದ್ರ<br>ಮಂಡ್ಯ | ವಿಶೇಷ ಅಧಿಕಾರಿಗಳು<br>ಸಂಶೋಧನಾ ಕೇಂದ್ರ<br>ಪರೀಕ್ಷಾ ಶಾಖೆ | 13-11-2014ರಿಂದ ಇಲ್ಲಿಯವರೆಗೆ |
| 6. | ಡಾ. ಚಂದ್ರಶೇಖರ್<br>ಸಹಾಯಕ ಪ್ರಾಧ್ಯಾಪಕರು<br>ಭೂಗೋಳಶಾಸ್ತ್ರ<br>ಅಧ್ಯಯನ ವಿಭಾಗ<br>ಮಾಗಂ, ಮೈಸೂರು | ಕಾರ್ಯಕ್ರಮ<br>ಸಂಯೋಜನಾಧಿಕಾರಿ<br>ರಾಷ್ಟ್ರೀಯ ಸೇವಾ ಯೋಜನೆ | 13-11-2014ರಿಂದ ಪರೀಕ್ಷಾ ವಿಭಾಗದ ಪಿಎಚ್.ಡಿ. ಶಾಖೆಯಲ್ಲಿ ವಿಶೇಷಾಧಿಕಾರಿಯಾಗಿ ಕಾರ್ಯನಿರ್ವಹಿಸಿ, ಪ್ರಸ್ತುತ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಕಾರ್ಯಕ್ರಮ ಸಂಯೋಜನಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. |

ತಮ್ಮ ವಿಶ್ವಾಸಿ

ಕುಲಸಚಿವರು

ಪ್ರತಿ:

1. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ನಿರ್ದೇಶಕರು, ಪಿ.ಎಂ.ಇ.ಬಿ., ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಕಛೇರಿ ಪ್ರತಿ.